بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 20

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಮೇ 2021, 20 ಹಿಜ್ರತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
07 ಶವ್ವಾಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَعَدَ اللّٰهُ الَّذِيْنَ
اٰمَنُوْا وَعَمِلُوا الصّٰلِحٰتِ ۙ
لَهُمْ مَّغْفِرَةٌ وَّاَجْرٌ عَظِيْمٌ

(ಅಲ್‌ಮಾಇದ: 10)

ಅಂದರೆ: ಸತ್ಯವಿಶ್ವಾಸ ಹೊಂದಿ ಸತ್ಕರ್ಮ ಮಾಡುವವರೊಡನೆ, ಅವರಿಗೆ ಕ್ಷಮೆ ಮತ್ತು ಹಿರಿದಾದ ಪ್ರತಿಫಲವಿದೆಯೆಂದು ಅಲ್ಲಾಹನು ವಾಗ್ದಾನ ಮಾಡಿರುವನು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್‌ರತ್ ರಸೂಲುಲ್ಲಾಹ್(ಸ) ರವರ ಮೂರು ಉನ್ನತ ದರ್ಜೆಯ ಸಹಾಬರುಗಳ ಸಾಕ್ಷ್ಯ

(1246) ಹಝ್‌ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ, ನಬಿ(ಸ) ಹೇಳಿದರು! ಝೈದರು ಧ್ವಜ ಎತ್ತಿಕೊಂಡರು. ಅವರು ಶಹೀದರಾದರು. ಮತ್ತೆ ಜಾಫರ್ ಎತ್ತಿಕೊಂಡರು. ಅವರೂ ಶಹೀದರಾದರು. ಮತ್ತೆ ಅಬ್ದುಲ್ಲ ಬಿನ್ ರವಾಹ ತೆಗೆದುಕೊಂಡರು. ಅವರು ಶಹೀದರಾದರು. (ಅವರು ಇದನ್ನು ಹೇಳುತ್ತ ಹೋಗುತ್ತಿದ್ದರು) ಸ್ಥಿತಿ ಹೇಗಿತ್ತೆಂದರೆ ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಮತ್ತೆ ಹಝುರತ್ ಖಾಲಿದ್ ಬಿನ್ ವಲೀದ್ ಅದನ್ನು ಮುಖಂಡತ್ವವಿಲ್ಲದೆ ತೆಗೆದುಕೊಂಡರು ಮತ್ತು ಅವರಿಗೆ ವಿಜಯ ದೊರಕಿತು.

ಹಝ್‌ರತ್ ಸಯ್ಯದ ಝೈನುಲ್ ಆಬಿದೀನ್ ವಲಿಯುಲ್ಲ ಶಾಹ್(ರ) ಈ ಹದೀಸನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ: ಮೌತ ಯುದ್ಧದೆಡೆ ಸಂಕೇತವಿದೆ. ಅದು ಸೀರಿಯದ ಗಡಿ ಭಾಗದಲ್ಲಾಯಿತು. ಈ ಯುದ್ಧದಲ್ಲಿ ಹಝ್‌ರತ್ ಝೈದ್ ಬಿನ್ ಹಾರ್ಸ್ ಸೈನ್ಯಾಧಿಕಾರಿಗಳಾಗಿ ನಿಯುಕ್ತಿಗೊಂಡಿದ್ದರು. ಅವರು ಸ್ವತಂತ್ರಗೊಂಡ ಗುಲಾಮರಾಗಿದ್ದರು. ಹಝುರತ್ ರಸೂಲುಲ್ಲಾಹ್(ಸ) ನುಡಿದಿದ್ದರು. ಅವರು ಶಹೀದರಾದರೆ ಹಝ್‌ರತ್ ಜಾಫರ್, ಅವರು ಶಹೀದರಾದರೆ ಹಝ್‌ರತ್ ಅಬ್ದುಲ್ಲ ಬಿನ್ ರವಾಹ ಸೈನ್ಯಾಧಿಕಾರಿಗಳಾಗುವವರು. ಮುಸಲ್ಮಾನರ ಕಡೆ ಮೂರು ಸಾವಿರ ಸೈನ್ಯವಿತ್ತು. ಶತ್ರುಗಳ ಸೈನ್ಯ ಒಂದು ಲಕ್ಷ ಸಮೀಪವಿತ್ತು. ಈ ಮೂವರು ಉನ್ನತ ದರ್ಜೆಯ ಸಹಾಬರು ಒಬ್ಬರ ಮೇಲೆ ಒಬ್ಬರು ಯುದ್ಧ ಮೈದಾನದಲ್ಲಿ ಕಾರ್ಯಸಾಧಿಸಿದರು. ಅಂತಿಮವಾಗಿ ಹಝ್‌ರತ್ ಖಾಲಿದ್ ಬಿನ್ ವಲೀದ್‌ರ ಕೈಯಲ್ಲಿ ವಿಜಯ ದೊರಕಿತು. ಮೇಲೆ ವಿವರಿಸಿದ ಮೂರು ಸಹಾಬರ ಶಹಾದತಿನ ಸುದ್ದಿ ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ದಿವ್ಯ ಸ್ವಪ್ನಗಳ ಮೂಲಕ ಅಥವಾ ದೇವವಾಣಿ ಪಡೆದು ಸಮಯಕ್ಕಿಂತ ಮುಂಚೆಯೇ ತಿಳಿಸಿದ್ದರು. ಈ ಅಮೂಲ್ಯ ಮತ್ತು ನಿಷ್ಠಾವಂತ ಸಂಗಡಿಗರ ಅಗಲಿಕೆಯಿಂದ ಅವರ ಕಣ್ಣುಗಳಿಂದ ತಡೆಯಲಾರದೆ ಭಾಷ್ಪಗಳು ಸುರಿಯುತಿತ್ತು.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಎಝ್, ಮುದ್ರಣ ಖಾದಿಯಾನ್ 2006)**

## ನಾವು ಪದೇ ಪದೇ ಜಾಹೀರಾತು ನೀಡುವ ಮತ್ತು ಜನರಿಗೆ ಅನುಭವ ಪಡೆಯಲು ಕರೆಯುವ ಉದ್ದೇಶ ನಾವು ಸ್ವಯಂ ದರ್ಶನ ಪಡೆದಂತಹ ಆ ದೇವನೆಡೆ (ಅಲ್ಲಾಹನೆಡೆ) ಮಾರ್ಗದರ್ಶನ ನೀಡುವ ಉದ್ದೇಶದ ಹೊರತು ಬೇರೇನೂ ಇಲ್ಲ.

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಆ ವಿಗ್ರಹ ಮಾಡುವವರು ಅಲ್ಲಾಹನು ಅದೃಶ್ಯನಾಗಿರುವ ಮರ್ಮವನ್ನು, ಅಲ್ಲಾಹನು ತನ್ನನ್ನು ಅದೃಶ್ಯ ಸ್ಥಿತಿಯಲ್ಲಿರಿಸುವ ಸ್ಥಿತಿಯ ಮರ್ಮ ಮತ್ತು ಜಾಣ್ಮೆಯನ್ನು ತಿಳಿಸಲಿಲ್ಲ. ನನ್ನ ದೃಷ್ಟಿಯಲ್ಲಿ ಅಲ್ಲಾಹನು ಅದೃಶ್ಯವಾಗಿರುವ ಕಾರಣವೇ ಮನುಷ್ಯನಿಗೆ ಅವನನ್ನು ಪಡೆಯುವ ಅನುಭವಿಸುವ ಕುತೂಹಲ ಹಾಗೂ ಸಂಶೋಧನೆಗಳಿಗೆ ದಾರಿಮಾಡಿಕೊಡುತ್ತದೆ. ಎಷ್ಟೆಲ್ಲ ವಿದ್ಯೆಗಳಿವೆಯೋ, ತತ್ವಜ್ಞಾನಗಳಿವೆಯೋ ಅವು ಮೊದಲಿನಿಂದಲೂ ಇದ್ದವು, ಆದರೆ ರಹಸ್ಯಮಯವಾಗಿದ್ದವು. ಮನುಷ್ಯನು ಅದರ ಮರ್ಮ ಹುಡುಕುವ ಪ್ರಯತ್ನಗಳಿಂದಾಗಿ ತನ್ನ ಉದ್ದೇಶವನ್ನು ಅಂತಿಮವಾಗಿ ಪಡೆಯುವಂತಾಯಿತು. ಯಾವ ರೀತಿ ಓರ್ವ ಸತ್ಯ ಪ್ರೇಮಿಯ, ಪ್ರೇಯಸಿ ತನ್ನ ಮುಂದಿದ್ದರು. ತನ್ನಿಂದ ದೂರವಾಗಿದ್ದರೂ ಅವನಿಗೆ ಅದು ಯಾವ ವ್ಯತ್ಯಾಸವು ಬೀರುವುದಿಲ್ಲ. ಬದಲು ಆ ಏಕಾಂಗಿತನದಲ್ಲೂ ತಮ್ಮ ಭಾವನೆಗಳಿಗೆ ಪ್ರಚೋದನೆ ನೀಡಿ ಇನ್ನಷ್ಟು ಹಂಬಲಿಸುತ್ತಾನೆ. ಅದೇ ರೀತಿ ವಿಗ್ರಹ ಹಿಡಿದು ಅಲ್ಲಾಹನನ್ನು (ದೇವನನ್ನು) ಪಡೆಯ ಬಯಸುವವನು ಹೇಗೆ ಮತ್ತು ಯಾವಾಗ ಅವನ ನಿಜವಾದ ಪ್ರೀತಿಯ ದಾಸನಾಗಬಲ್ಲನು. ಅದಾಗ್ಯೂ ವಿಗ್ರಹವಿದ್ದ ಕಾರಣ ಅವನ ಸಂಪೂರ್ಣ ಲಕ್ಷ್ಯ ದೇವನ ಅಸ್ತಿತ್ವದತ್ತ ಹೋಗುವುದಿಲ್ಲ. ಮನುಷ್ಯನು ತನ್ನ ಪ್ರೀತಿಯ ಪರೀಕ್ಷೆ ತಾನೇ ಮಾಡಿಕೊಳ್ಳಲಿ. ನಿಜವಾದ ಪ್ರೀತಿ ಇದ್ದವನು ಓರ್ವ ಸತ್ಯ ಪ್ರೇಮಿಯ ಹಾಗೆ ನಿಂತರು, ನಡೆದರು, ಎದ್ದರೂ ಬಿದ್ದರೂ ಜಾಗೃತಾವಸ್ಥೆಯಲ್ಲಿದ್ದರೂ ಅಥವಾ ಸ್ವಪ್ನಾವಸ್ಥೆಯಲ್ಲಿದ್ದರೂ ತನ್ನ ಪ್ರೇಯಸಿಯ ಮುಖವೇ ಕಾಣುತ್ತದೆ. ಅವನ ಲಕ್ಷ್ಯವೆಲ್ಲ ಅವಳಡೆಗೆಯೇ ಇದ್ದರೆ ತಿಳಿದುಕೊಳ್ಳಿರಿ. ಅವನಿಗೆ ದೇವನೊಂದಿಗೆ ಪ್ರೀತಿಯಿದೆ ಮತ್ತು ನಿಶ್ಚಯವಾಗಿಯೂ ಆ ದೇವನ ಪ್ರೇಮ ಅವನ ಹೃದಯದಲ್ಲಿದೆ. ಆದರೆ ಮಧ್ಯದಲ್ಲಿ ಯಾವುದೇ ರೀತಿ ತೊಡರುಗಳು ಇದ್ದರೆ ಅವನ ಲಕ್ಷ್ಯ ವಿಭಜಿತವಾಗಬಹುದು. ಅವನ ಹೃದಯದಿಂದ ದೂರವಾಗಬಹುದು. ಅವನು ದೇವನ ಪ್ರೇಮಿ ಅನಿಸಿಕೊಳ್ಳುವುದಿಲ್ಲ. ಸತ್ಯಪ್ರೇಮಿಗಳಿಗೆ ಲಭಿಸುವಂತಹ ಆ ಪ್ರಕಾಶ ಅವನಿಗೆ ದೊರೆಯುವುದಿಲ್ಲ. ಈ ಅವಸ್ಥೆಯಲ್ಲಿಯೇ ಹೆಚ್ಚಿನ ಜನರು ಎಡವಿಬಿಡುತ್ತಾರೆ. ಮತ್ತು ದೇವರನ್ನು ತಿರಸ್ಕಾರ ಮಾಡುತ್ತಾರೆ. ತನ್ನ ಪ್ರೀತಿಯನ್ನು ಪರೀಕ್ಷಿಸದೆ. ಅದರ ರಹಸ್ಯ ತಿಳಿಯದೇ ದೇವನ ಮೇಲೆ ಶಂಕೆ ಉಂಟು ಮಾಡಿಕೊಂಡರು. ಆದುದರಿಂದ ನನ್ನ ಭಾವನೆಯಲ್ಲಿ ಅಲ್ಲಾಹನು ಅದೃಶ್ಯವಾಗುವುದಲ್ಲಿಯೇ ಹಿತ ಅಡಗಿದೆ. ಮನುಷ್ಯನ ಸೌಭಾಗ್ಯ ಹಾಗೂ ಆಧ್ಯಾತ್ಮಿಕ ಪ್ರಗತಿಗೋಸ್ಕರ ಮತ್ತು ಆತ್ಮಮಂಥನ ಶಕ್ತಿಗಳನ್ನು ಬಲಪಡಿಸಲು ಅನಿವಾರ್ಯವಾಗಿದೆ. ನಾವು ಪದೇ ಪದೇ ಜಾಹೀರಾತು ನೀಡುವ ಮೂಲಕ ಜನರಿಗೆ ಅನುಭವ ಪಡೆಯಲು ಕರೆಯುತ್ತೇನೆ. ಕೆಲ ಜನರು ನಮ್ಮನ್ನು ವ್ಯಾಪಾರಿ ಅನ್ನುತ್ತಾರೆ. ಒಬ್ಬನು ಇನ್ನೊಂದು, ಮಗದೊಬ್ಬನು ಮತ್ತೊಂದು ಹೇಳುತ್ತಾನೆ. ಅಂತೂ ಈ ಬಗೆ ಬಗೆಯ ಮಾತುಗಳನ್ನು ಕೇಳಿ ಅದು ಈ ಲೋಕದಲ್ಲಿರುವ ಪ್ರತಿಯೊಂದು ದೇಶದ ಸ್ಥಿತಿಯಾಗಿದೆ. ಯೂರೋಪ್, ಅಮೇರಿಕಾ ಮುಂತಾದವುಗಳಲ್ಲಿ ಜಾಹೀರಾತು ನೀಡುತ್ತೇವೆ. ಅದೇಕೆ ಯಾವ ಉದ್ದೇಶದಿಂದ?

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

**ಎಲ್ಲ ವಿಫಲತೆಗಳ ಬೇರು ಧೃತಿಗೆಡುವುದಾಗಿದೆ**

**ಯಾವ ವ್ಯಕ್ತಿ ದೃಡ ನಿಶ್ಚಯ ಮತ್ತು ದೃಢ ಜ್ಞಾನವಿಲ್ಲದ ಕಾರ್ಯ ಮಾಡುವುದಾದರೆ ಅವನು ಸದಾ ತನ್ನ ವೃತ್ತಿಯಲ್ಲಿ ಅಥವಾ ತನ್ನ ಉದ್ದೇಶ ಸಾಧನೆಯಲ್ಲಿ ವಿಫಲನಾಗುವನು.**

ಸಯ್ಯದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಯೂಸುಫ್ ಆಯತ್ 88 **ಯಾ ಬನೈಯಝ್‌ಹಬೂ ಫತಹಸ್ಸಸೂ ಮಿಂಯ್ಯೂಸುಫ ವ ಅಖೀಹಿ ವಲಾತಅಸೂ ಮಿಂರ್‍ರೂಹಿಲ್ಲಾಹಿ ಇಲ್ಲಲ್ ಖೌಮುಲ್ ಕಾಫಿರೂನ್** ವಚನದ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

ಈ ವಚನದಿಂದ ಸ್ಪಷ್ಟವಾಗುವುದೇನೆಂದರೆ ಹಝ್‌ರತ್ ಯಾಕೂಬ್(ಅ) ರಿಗೆ ಹಝ್‌ರತ್ ಯೂಸೂಫ್(ಅ) ಜೀವಂತವಾಗಿರುವ ಮತ್ತು ಈಜಿಪ್ಟ್ ನಲ್ಲಿರುವ ಸುದ್ದಿ ಅಲ್ಲಾಹನಿಂದ ಅವರಿಗೆ ತಿಳಿದಿತ್ತು. ಇಲ್ಲವಾಗಿದ್ದಲ್ಲಿ ಒಬ್ಬ ಹುಡುಗನಿಗೆ ತೋಳ ತಿಂದಿದೆ ಮತ್ತು ಅವನು ಮರಣ ಹೊಂದಿದ್ದಾನೆ ಎಂದು ತಿಳಿದೂ ತಮ್ಮ ಮಕ್ಕಳಿಗೆ ಹುಡುಕಿ ತರಲು ಆದೇಶ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

**ಯಾರೇ ಪ್ರವಾದಿತ್ವದ ದಾವೆ ಸಾರಿದವನಿಗೋಸ್ಕರ ಸೂರ್ಯ, ಚಂದ್ರ ಗ್ರಹಣ ಉಂಟಾಯಿತು ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿ ವೈಭವಯುತ ಬಹುಮಾನದ ಪಂಥಹ್ವಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಹ್ವಾನ ನಾವು ಅವರ ಗ್ರಂಥ "ನೂರುಲ್ ಹಖ್" ಭಾಗ ಎರಡು, ರೂಹಾನಿ ಖಝಾಯಿನ್ ಸಂಪುಟ ಒಂದರಿಂದ ಪ್ರಸ್ತುತಪಡಿಸುತ್ತಿದ್ದೇವೆ. ನಮ್ಮ ಪ್ರೀತಿಯ ಒಡೆಯರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರು ತನ್ನ ಸಮುದಾಯದಲ್ಲಿ ಆಗಮಿಸಬೇಕಾದ ಮಸೀಹ್ ಮಹದಿಯ ಸತ್ಯ ಸಾಕ್ಷ್ಯಗೋಸ್ಕರ ರಂಝಾನ್ ತಿಂಗಳಿನಲ್ಲಿ ಚಂದ್ರ ಮತ್ತು ಸೂರ್ಯ ಗ್ರಹಣ ಉಂಟಾಗುವ ಭವಿಷ್ಯವಾಣಿ ಮಾಡಿದ್ದರು. ಅವರು ನುಡಿದರು.

اِنَّ لِمَھْدِیِّنَا اٰیَتَیْنِ لَمْ تَکُوْنَا مُنْذُ خَلْقِ السَّمٰوٰتِ وَالْاَرْضِ یَنْکَسِفُ الْقَمَرُ لِاَوَّلِ لَیْلَۃٍ مِنْ رَمَضَانَ وَتَنْکَسِفُ الشَّمْسُ فِی النِّصْفِ مِنْہُ وَلَمْ تَکُوْنَا مُنْذُ خَلَقَ اللّٰہُ السَّمٰوٰتِ وَالْاَرْضَ۔

(ಸುನನ್ ದಾರ ಖುತ್‌ನಿ)

ಅಂದರೆ ನಮ್ಮ ಮಹದಿಯರಿಗಾಗಿ ಎರಡು ದೃಷ್ಟಾಂತಗಳಿವೆ. ಈ ದೃಷ್ಟಾಂತವು ಬಾಯ್ಯಾಕಾಶ ಸೃಷ್ಟಿಗೊಂಡಾಗಿನಿಂದ ಎಂದೂ (ಯಾವುದೇ ಸುಧಾರಕನ ಸತ್ಯ ಸಾಕ್ಷ್ಯಕ್ಕಾಗಿ) ಉಂಟಾಗಲಿಲ್ಲ. (ಆ ಎರಡು ದೃಷ್ಟಾಂತಗಳು ಇದಾಗಿವೆ). ಖಮರ್ (ಚಂದ್ರ)ನನ್ನು, ರಂಝಾನಿನಲ್ಲಿ (ಅದಕ್ಕೆ ಗ್ರಹಣ ಹಿಡಿಯುವ ರಾತ್ರಿಗಳಲ್ಲಿ) ಮೊದಲ ರಾತ್ರಿಯಲ್ಲಿ ಗ್ರಹಣ ಹಿಡಿಯುವುದು. ಅಂತೆಯೇ ಸೂರ್ಯನನ್ನು (ಅದಕ್ಕೆ ಗ್ರಹಣ ಹಿಡಿಯುವ ತಾರೀಖುಗಳಲ್ಲಿ) ಮಧ್ಯದ ತಾರೀಖಿನಲ್ಲಿ ಗ್ರಹಣ ಹಿಡಿಯುವುದು. ಅಲ್ಲಾಹನು ಭೂಮ್ಯಾಕಾಶ ಸೃಷ್ಟಿಸಿದಾಗಿನಿಂದ ಈ ಎರಡು ದೃಷ್ಟಾಂತಗಳನ್ನು (ಯಾವ ದಾವೆದಾರನ ಸತ್ಯ ಸಾಕ್ಷ್ಯಕ್ಕಾಗಿ) ಪ್ರಕಟಗೊಳಿಸಲಿಲ್ಲ.

ಈ ದೃಷ್ಟಾಂತ 1894 ರಲ್ಲಿ ಪ್ರಕಟವಾಯಿತು. ಚಂದ್ರನಿಗೆ 21 ಮಾರ್ಚ್ 1894 ರಂದು 13ನೇ ತಾರೀಖಿಗೆ ಗ್ರಹಣ ಹಿಡಿಯಿತು. ಅಂತೆಯೇ ಸುರ್ಯನನ್ನು ರಂಝಾನಿನ 28 ತಾರೀಖಿನಂದು ಗ್ರಹಣ ಹಿಡಿಯಿತು. ಅದಕ್ಕಿಂತ ನಾಲ್ಕು ವರ್ಷಗಳ ಹಿಂದೆ 1890 ರಂದು ಹಝ್ರತ್ ಮಸೀಹ್ ಮೌಊದ್(ಅ) ಮಸೀಹರೆಂದು ದಾವೆ ಹೂಡಿದ್ದರು.

ಆಗ ಭಾರತದಾದ್ಯಂತ ಅವರ ವಿರೋಧದಲ್ಲಿ ಎಲ್ಲಿಲ್ಲದ ಅಬ್ಬರದ ಅಲೆ ಪ್ರಾರಂಭವಾಯಿತು. ನಾಲ್ಕು ವರ್ಷಗಳ ನಂತರ 1894 ರಲ್ಲಿ ಅವರ ಪರವಾಗಿ ಸಾಕ್ಷ್ಯವಹಿಸಲು ಈ ದೃಷ್ಟಾಂತ ಗೋಚರವಾದಾಗ ಉಲಮಾಗಳು ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧದ ಭರದಲ್ಲಿ ಅವರ ಶತೃತ್ವದಲ್ಲಿ ಈ ಮಹೋನ್ನತವಾದ ದೃಷ್ಟಾಂತವನ್ನು ಅಲ್ಲಗಳೆದರು. ಈ ಭವಿಷ್ಯವಾಣಿಯ ಮೇಲೆ ನಾನಾ ರೀತಿಯ ಆಕ್ಷೇಪಗಳನ್ನು ಎತ್ತಿದರು. ಒಂದು ಆಕ್ಷೇಪದ ಉತ್ತರವು ನಾವು ಹಿಂದಿನ ಸಂಚಿಕೆಯಲ್ಲಿ ಕೊಟ್ಟಿರುತ್ತೇವೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಾವಿರ ರೂಪಾಯಿ ಬಹುಮಾನ ಘೋಷಿಸಿದ್ದರು. ಇಲ್ಲಿ ನಾವು ಇನ್ನೊಂದು ರೀತಿಯ ಆಕ್ಷೇಪದ ಉತ್ತರ ನೀಡುವೆವು. ಆ ಆಕ್ಷೇಪವೇನೆಂದರೆ. ಹದೀಸಿನಲ್ಲಿ ವಿಶೇಷ ರೀತಿಯ ಚಂದ್ರ, ಸೂರ್ಯ ಗ್ರಹಣ ಉಂಟಾಗುವುದು ಎಂದಿದೆ. ಆದರೆ ಇದು ಸರ್ವೆಸಾಮಾನ್ಯ ರೀತಿಯ ಗ್ರಹಣವಾಗಿವೆ. ಅವು ಉಂಟಾಗುವುದು ಮಾಮೂಲಾಗಿದೆ ಎಂದು.

ಅದರ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "**ತಕೂನ**"ದ ಸಂಭಂಧ '**ಆಯತೈನಿ**' ಯಿಂದ ಇದೆಯೇ ಹೊರತು ಚಂದ್ರ, ಸೂರ್ಯ ಗ್ರಹಣಕ್ಕೆ ಸಂಬಂಧಿಸಿದ್ದಲ್ಲ. ಚಂದ್ರ ಸೂರ್ಯ ಗ್ರಹಣಕ್ಕೆ ಸಂಬಂಧಿಸಿದ್ದಾಗಿರುತ್ತಿದ್ದರೆ ತಕೂನ ಜಾಗದಲ್ಲಿ ಯಾಕೂನ ಆಗಬೇಕಿತ್ತು.

ಭವಿಷ್ಯವಾಣಿಯಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಪದಗಳು ಹೀಗಿವೆ. ಲಮ್ ತಕೂನ.. ಅಂದರೆ ಈ ಎರಡು ದೃಷ್ಟಾಂತಗಳು ಹೀಗಿವೆ. ಅದು ಭೂಮ್ಯಾಕಾಶ ಸೃಷ್ಟಿಯಾದಾಗಿನಿಂದ ಯಾವ ಪ್ರವಾದಿತ್ವ ವಾದಿಗಳಿಗೋಸ್ಕರ ಉಂಟಾಗಿರಲಿಲ್ಲ. ಅಂದರೆ ಚಂದ್ರ ಸೂರ್ಯ ಗ್ರಹಣಗಳು ನಿಗದಿತ ತಾರೀಖುಗಳಲ್ಲಿ ರಂಝಾನ್ ತಿಂಗಳಿನಲ್ಲಿ ಮಸೀಹನ ದಾವೆದಾರ ಉಪಸ್ಥಿತರಿರಬೇಕು. ಈ ರೀತಿಯ ಗ್ರಹಣ ಎಂದೂ ಉಂಟಾಗಲಿಲ್ಲ. ಈ ನೆಲೆಯಲ್ಲಿ ವಿಚಾರಿಸಿ ನೋಡಬೇಕಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ದೃಷ್ಟಾಂತವನ್ನು ವಿಶೇಷ ಎಂದು ಸಾರಿದ್ದಾರೆ. ಇಂತಹ ದೃಷ್ಟಾಂತವು ಯಾವ ಪ್ರವಾದಿತ್ವ ವಾದಿಯ ಮುಂದೆ, ಭೂಮ್ಯಾಕಾಶ ಸೃಷ್ಟಿಯಾದಾಗಿನಿಂದ ಉಂಟಾಗಲಿಲ್ಲ. ಭವಿಷ್ಯವಾಣಿಯಲ್ಲಿ ಚಂದ್ರ ಸೂರ್ಯ ಗ್ರಹಣಗಳು ವಿಶೇಷ ರೀತಿಯಲ್ಲಿ ಉಂಟಾಗುವುದು ಎಂದಿಲ್ಲ. ಗ್ರಹಣ ವಿಶೇಷ ರೀತಿಯದ್ದಾಗುವುದು ಎಂದಿಲ್ಲ. ಬದಲು ದೃಷ್ಟಾಂತವು ಅಚ್ಚರಿದಾಯಕವಾಗಿರುವುದು ಎಂಬ ವಿವರಣೆ ಇದೆ. ಗ್ರಹಣ ಅಂತೂ ಸಾಮಾನ್ಯ ದೈವಿಕ ವಿಧಿನಿಯಮದಂತೆಯೇ ಉಂಟಾಗುತ್ತದೆ. ಆದರೆ ಅದೇ ಸೂರ್ಯ ಚಂದ್ರ ಗ್ರಹಣಗಳು ಎರಡೂ ರಂಝಾನ್ ತಿಂಗಳಿನಲ್ಲಿ ಉಂಟಾಗುವುದು, ಚಂದ್ರನನ್ನು ಅದರ ನಿಗದಿತ ತಾರೀಖುಗಳಲ್ಲಿ ಮೊದಲ ತಾರೀಖಿಗೆ ಗ್ರಹಣ ಹಿಡಿಯುವುದು, ಸೂರ್ಯನನ್ನು ರಂಝಾನಿನಲ್ಲಿ ಅದರ ನಿಗದಿತ ತಾರಿಖುಗಳಲ್ಲಿ ಮಧ್ಯದ ತಾರೀಖಿಗೆ ಗ್ರಹಣ ಹಿಡಿಯುವುದು ಅಂದರೆ 28 ತಾರಿಖಿಗೆ ಅವುಗಳ ಮುಂಚೆಯೇ ಮಸೀಹನ ದಾವೆ ಹೂಡುವವನು ಉಪಸ್ಥಿತನಾಗಿರಬೇಕು ಮತ್ತು ಅದೇ ಅಬ್ಬರದಿಂದ ಅವರನ್ನು ವಿರೋಧಿಸುವವರು ಇರಬೇಕು, ಸುಳ್ಳುಗಾರರೆಂದು ಅಪಾದಿಸಬೇಕು, ಇಂತಹ ಪರಿಸ್ಥಿತಿಗಳಲ್ಲಿ ಅಲ್ಲಾಹನು ಅವರ ಪರವಾಗಿ ಈ ದೃಷ್ಟಾಂತವನ್ನು ಪ್ರಕಟಿಸಬೇಕು. ಈ ದೃಷ್ಟಾಂತವು ಒಂದು ಅಸಾಧಾರಣ ದೃಷ್ಟಾಂತವಾಗಿರುತ್ತದೆ. ಅದು ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿ ಪ್ರಕಾರ ಎಂದಿನಿಂದ ಈ ಭೂಮ್ಯಾಕಾಶ ಸೃಷ್ಟಿಯಾಗಿದೆಯೇ ಯಾವ ಪ್ರವಾದಿತ್ವ ದಾವೆದಾರನ ಮುಂದೆ ಉಂಟಾಗಲಿಲ್ಲ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪಂಥಹ್ವಾನ ನೀಡಿದರು. ಯಾರಾದರೂ ಅದರ ಉದಾಹರಣೆ ಪ್ರಸ್ತುತಪಡಿಸಿದರೆ, ಇಂತಹ ದೃಷ್ಟಾಂತ ಹಿಂದೆಯೂ ಒಬ್ಬ ಪ್ರವಾದಿತ್ವ ಅಥವಾ ಸುಧಾರಕನಿಗೋಸ್ಕರ ಉಂಟಾಗಿದೆ ಎಂದಾದರೆ ಅವರಿಗೆ ನಾನು ಒಂದು ಸಾವಿರ ರೂಪಾಯಿಯ ಬಹುಮಾನ ನೀಡುವೆನು. ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್‌ರವರು ಇದರ ಬಗ್ಗೆ ವ್ಯಕ್ತಪಡಿಸಿದ ಕೆಲವು ರೋಚಕ ಹಾಗೂ ವಿಶ್ವಾಸವರ್ಧಕ ಅಧ್ಯಾಪನೆಗಳು ಪ್ರಸ್ತುತಪಡಿಸುತ್ತಿದ್ದೇವೆ.

**ಯಹೂದ್ಯರಿಗಾಗಿ ಅಲ್ಲಾಹನು ಗ್ರಂಥಗಳಿಂದ ಹೇರಲ್ಪಟ್ಟ ಕತ್ತೆಯ ಉದಾಹರಣೆ ನೀಡಿದನು. ಆದರೆ ಇಲ್ಲಿ ಬರೀ ಕತ್ತೆಗಳಿವೆ, ಗ್ರಂಥಗಳು ಗೌರವದಿಂದಲೂ ವಂಚಿತರಾಗಿದ್ದಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಅವರ ಈ ಭಾವನೆ. ಹದೀಸಿನಲ್ಲಿರುವ ವಾಕ್ಯ ಹೀಗಿದೆ. ಲಮ್ ತಕೂನ. . . ಅದರ ತಾತ್ಪರ್ಯ ಈ ಚಂದ್ರ ಸೂರ್ಯ ಗ್ರಹಣಗಳು ಒಂದು ಪವಾಡವಾಗಿರುವುದೇ ಹೊರತು ಉಭಯೇತ್ರರು ತಿಳಿದಂತೆ ಸಾಮಾನ್ಯ ರೀತಿಯ ಗ್ರಹಣವಲ್ಲ. ಅವರ ಈ ಭ್ರಮೆಯೇ ಅವರ ಮೇಲೆ ಸಾಕ್ಷಿಯಾಗಿದೆ. ಅವರು ಅರಬಿ ಸಾಹಿತ್ಯದಿಂದ ಕಿಂಚಿತ್ತೂ ಜ್ಞಾನ ಹೊಂದಿಲ್ಲ. ಅದರಿಂದ ಸಂಪೂರ್ಣ ಅಜ್ಞಾನಿಗಳಾಗಿದ್ದಾರೆ. ಯಹೂದ್ಯರಿಗಾಗಿ ಅಲ್ಲಾಹನು ಗ್ರಂಥಗಳಿಂದ ಹೇರಲ್ಪಟ್ಟ ಕತ್ತೆಯ ಉದಾಹರಣೆ ನೀಡಿದೆ. ಆದರೆ ಇವು ಬರೀ ಕತ್ತೆಗಳಾಗಿವೆ. ಗ್ರಂಥಗಳ ಗೌರವದಿಂದಲೂ ವಂಚಿತರಾಗಿದ್ದಾರೆ. ಪ್ರತಿಯೊಬ್ಬ ವಿವೇಕಶೀಲನು ತಿಳಿಯಬಹುದಾಗಿದೆ. ಇಲ್ಲಿ 'ಲಮ್ ತಕೂನ ಎಂಬ ಪದವು 'ಆಯತೈನಿ' ಪದಕ್ಕೆ ಸಂಬಂಧಿಸಿದ್ದಾಗಿದೆ. ಅದರ ಅರ್ಥ ಈ ಎರಡೂ ದೃಷ್ಟಾಂತಗಳು ಮಹದಿಯರನ್ನು ಹೊರತುಪಡಿಸಿ ಯಾರಿಗಾದರೂ ನೀಡಲ್ಪಟ್ಟಿಲ್ಲ. ಅಂದ ಹಾಗೆ ಇಲ್ಲಿ ಸೂರ್ಯ ಚಂದ್ರ ಗ್ರಹಣಗಳು ಅಸಾಮಾನ್ಯವಾಗಿರುವುದು ಎಂದು ತಿಳಿಯುವಂತಹ ಯಾವ ಪದಗಳಿವೆ. ಉದ್ದೇಶ ಇಷ್ಟೇ ಆಗಿತ್ತು. ರಂಝಾನಿನಲ್ಲಿ ಈ ತಾರೀಖುಗಳಲ್ಲಿ ವಾಗ್ದತ್ತ ಮಹದಿಯರ ಹೊರತು ಯಾರಿಗಾಗಿಯೂ ಸೂರ್ಯ ಚಂದ್ರ ಗ್ರಹಣ ಉಂಟಾಗುವಂತಹ ಸಂದರ್ಭ ಒದಗಿ ಬಂದಿಲ್ಲ. ಭವಿಷ್ಯವಾಣಿಯ ಪದಗಳು ನಿಚ್ಚಳವಾಗಿವೆ. ಅದರಿಂದ ಸಾಬೀತಾಗುತ್ತದೆ. ಲಮ್ ತಕೂನ ಪದದ ತಾತ್ಪರ್ಯವು ವಾಗ್ದತ್ತ ಮಹದಿಯರಿಗೆ ಒಂದು ಗೌರವ ಸೂಚಿಸುವುದಾಗಿದೆ. ಅದಕ್ಕಾಗಿ ಈ ದೃಷ್ಟಾಂತ ವಿಶಿಷ್ಟವೆನಿಸಿದೆ. ಅಂದ ಹಾಗೆ ಭವಿಷ್ಯವಾಣಿಯ ಭಾವವು ಅದೇ ಆಗಿದೆ. ಈ ದೃಷ್ಟಾಂತ ಯಾವ ಅನ್ಯ ದಾವೆದಾರನಿಗೆ ನೀಡಲಾಗಿಲ್ಲ. ಈ ದೃಷ್ಟಾಂತ ಕೇವಲ ವಾಗ್ದತ್ತ ಮಹದಿಯರಿಗೆ ನೀಡಲಾಗಿದೆ.

ಈ ಅತಿಕರ್ಮಿ ಮೌಲ್ವಿಗಳು ಈ ರೀತಿಯ ಚಂದ್ರ ಸೂರ್ಯ ಗ್ರಹಣಗಳು ಇನ್ನೊಬ್ಬ ದಾವೆದಾರನ ಕಾಲದಲ್ಲಿ ಆದದ್ದು ಪ್ರಸ್ತುತ ಪಡಿಸಬಹುದಾದರೆ ಪ್ರಸ್ತುತಪಡಿಸಲಿ. ಅದರಿಂದ ನಿಸ್ಸಂಶಯವಾಗಿಯೂ ನಾನು ಸುಳ್ಳುಗಾರನೆಂದಾಗುವೆನು. ಇಲ್ಲದಿದ್ದರೆ ಕೇವಲ ನನ್ನನ್ನು ವಿರೋದಿಸುವುದಕ್ಕೆ ಮಾತ್ರವೆ ಇಂತಹ ಮಹೋನ್ನತವಾದ ಪವಾಡ ಸದೃಶ್ಯ ದೃಷ್ಟಾಂತವನ್ನು ನಿರಾಕರಿಸದಿರಲಿ.(ಝುಮೀಮ, ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–331)

**ಎಂದೂ ಯಾವ ಪ್ರವಾದಿತ್ವವಾದಿ ಅಥವಾ ಸಂದೇಶವಾಹಕನಿಗೋಸ್ಕರ**

***(ಪುಟ 09 ರಲ್ಲಿ ಮುಂದುವರಿಸಲಾಗಿದೆ)***

# ಖುತ್‌ಬ ಜುಮುಅ

**ಪ್ರಾರ್ಥನೆಗಳ ಸ್ವೀಕಾರಕ್ಕಾಗಿ ಕೆಲವು ಶರತ್ತುಗಳಿವೆ, ಆದ್ದರಿಂದ ನಾವು ಈ ನಿಬಂಧನೆಗಳ ಪ್ರಕಾರ ನಮ್ಮ ದುಆಗಳನ್ನು ಮನೋಹರವನ್ನಾಗಿ ಮಾಡುವಾಗ ಅಲ್ಲಾಹನು ಸಹ ಅವನ ಸಾಮೀಪ್ಯವನ್ನು ನಮಗೆ ನೀಡುವನು ಮತ್ತು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವನು**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳಿಂದ ದುಆವಿನ ಪ್ರಾಮುಖ್ಯತೆ, ಪ್ರಾರ್ಥನೆಗಳ ಶರತ್ತುಗಳು, ಅದರ ತತ್ವ ಮತ್ತು ಅದರ ಆಳವಾದ ಅರ್ಥದ ಕುರಿತು ವಿಶ್ವಾಸ ವರ್ಧಕ ಪ್ರಸ್ತಾವನೆ**

**ಸುಮ್ಮನೇ ಸಾಮಾನ್ಯ ರೀತಿಯಲ್ಲಿ ದುಆ ಮಾಡಿಕೊಂಡು ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸಲಿಲ್ಲ ಎಂದು ಹೇಳುವವರು ನಮ್ಮಲ್ಲಿ ಹಲವರು ಇದ್ದಾರೆ. ಅಲ್ಲಾಹನೊಡನೆ ಒಂದು ಕೆಲಸ ಮಾಡಲು ಹೇಳಿಕೊಂಡು ಅದನ್ನು ಅವನು ಮಾಡಬೇಕೆಂಬ ರೀತಿಯಲ್ಲಿ ಅವರು ಹೇಳಿಕೊಳ್ಳುತ್ತಾರೆ. ನಊಧುಬಿಲ್ಲಾಹ್. ಅವರು ಏನೇ ಹೇಳಿದರೂ, ಅವರ ಕರ್ಮಗಳು ಹೇಗೇ ಇದ್ದರೂ ಅಲ್ಲಾಹನು ಅವರ ಆದೇಶಗಳನ್ನು ಪಾಲನೆ ಮಾಡಬೇಕೆಂಬ ರೀತಿಯಲ್ಲಿ ವರ್ತಿಸುತ್ತಾರೆ. ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ: ಇದು ಆಗಲಿಕ್ಕಿಲ್ಲ. ಮೊದಲು ಮನುಷ್ಯನು ಅಲ್ಲಾಹನ ಮಾತುಗಳನ್ನು ಅಂಗೀಕರಿಸಬೇಕು, ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ನಮ್ಮ ನಡೆವಳಿಕೆಗಳನ್ನು ಸರಿಪಡಿಸಬೇಕು.**

**ಅಲ್ಲಾಹನೊಂದಿಗೆ ಯಥಾರ್ಥ ಮತ್ತು ಸ್ಥಿರವಾದ ಸಂಬಂಧವನ್ನು ಮನುಷ್ಯನು ಸರಿಯಾದ ಪ್ರಯತ್ನದ ಮೂಲಕ ಸ್ಥಾಪಿಸುವನಾದರೆ, ಪಾಪಗಳಿಂದ ಸ್ಥಿರವಾಗಿ ರಕ್ಷಣೆ ಪಡೆಯುವಂತೆ ಅಲ್ಲಾಹನು ಅನುಗ್ರಹಿಸುತ್ತಾನೆ.**

**ಪಾಪಿಯು ತಾನು ಮಾಡಿರುವ ಪಾಪಗಳ ಆಧಿಕ್ಯದ ಬಗ್ಗೆ ಆಲೋಚಿಸಿಕೊಂಡು ಪ್ರಾರ್ಥನೆ ಮಾಡುವುದರಿಂದ ಬಿಟ್ಟುನಿಲ್ಲಬಾರದು. ದುಆ ಶಮನೌಷಧಿಯಾಗಿದೆ. ಪಾಪಗಳು ಎಷ್ಟು ಕೆಟ್ಟದು ಎಂದು ದುಆಗಳನ್ನು ಮಾಡುವುದರಿಂದ ಗೊತ್ತಾಗುವುದು. ಪಾಪಗಳಿಂದ ರಕ್ಷಣೆ ಹೊಂದಲು ಇರುವ ಮಾರ್ಗ ಪ್ರಾರ್ಥನೆಯೇ ಆಗಿದೆ. ಯಾರು ಪಾಪಗಳಲ್ಲಿ ಮುಳುಗಿಕೊಂಡು ದುಆ ಸ್ವೀಕಾರದ ಬಗ್ಗೆ ನಿರಾಶೆಹೊಂದುತ್ತಾನೋ ಮತ್ತು ಪಶ್ಚಾತ್ತಾಪ ಮಾಡುವುದಿಲ್ಲವೋ ಅವರು ಕೊನೆಗೆ ಪ್ರವಾದಿಗಳನ್ನು ಮತ್ತು ಅವರ ಪ್ರಭಾವಗಳನ್ನು ಕೂಡ ನಿಷೇಧಿಸುತ್ತಾರೆ.**

**ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಅತಿಯಾಗಿ ದುಆ ಮಾಡಿಕೊಂಡು ಕೂಡ ಅದರ ಪರಿಣಾಮಗಳು ಉಂಟಾಗಿಲ್ಲವೆಂದಾದರೆ, ಅದೇ ಅಲ್ಲಾಹನ ಯೋಜನೆಯಾಗಿರುತ್ತದೆ ಮತ್ತು ಅದರಲ್ಲೇ ಮನುಷ್ಯನ ಒಳಿತಿರುತ್ತದೆ.**

**ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತಖ್ವವನ್ನು ಶರೀಅತಿನ ಸಾರಾಂಶ ಮತ್ತು ಧರ್ಮಶಾಸನದ ತಿರುಳು ಎಂದು ಹೇಳಬಹುದು**

**ಇತರರಿಗೆ ದುಆ ಮಾಡುವುದರಿಂದಲೂ ದುಆಗಳನ್ನು ಸ್ವೀಕೃತವಾಗುತ್ತವೆ. ಈ ವಿಧಾನವನ್ನು ಯಾವಾಗಲೂ ನೆನಪಿನಲ್ಲಿಡಬೇಕು.**

**ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ವಿಷೇಶ ಕೋರಿಕೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16-04-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ-

اَلْحَمْدُ لِلّٰهِ رَبِّ الْعٰلَمِيْنَ- الرَّحْمٰنِ الرَّحِيْمِ- مٰلِكِ يَوْمِ الدِّيْنِ- إِيَّاكَ نَعْبُدُ وَإِيَّاكَ نَسْتَعِيْنُ-

اِهْدِنَا الصِّرَاطَ الْمُسْتَقِيْمَ- صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ-

يٰۤاَيُّهَا الَّذِيْنَ اٰمَنُوْا كُتِبَ عَلَيْكُمُ الصِّيَامُ كَمَا كُتِبَ عَلَى الَّذِيْنَ مِنْ قَبْلِكُمْ لَعَلَّكُمْ تَتَّقُوْنَ○ اَيَّامًا مَّعْدُوْدٰتٍ ؕ فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ فَمَنْ تَطَوَّعَ خَيْرًا فَهُوَ خَيْرٌ لَّهٗ ؕ وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ○ شَهْرُ رَمَضَانَ الَّذِيْۤ اُنْزِلَ فِيْهِ الْقُرْاٰنُ هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ فَمَنْ شَهِدَ مِنْكُمُ الشَّهْرَ فَلْيَصُمْهُ ؕ وَمَنْ كَانَ مَرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ يُرِيْدُ اللّٰهُ بِكُمُ الْيُسْرَ وَلَا يُرِيْدُ بِكُمُ الْعُسْرَ ۫ وَلِتُكْمِلُوا الْعِدَّةَ وَلِتُكَبِّرُوا اللّٰهَ عَلٰى مَا هَدٰىكُمْ وَلَعَلَّكُمْ تَشْكُرُوْنَ○ وَاِذَا سَاَلَكَ عِبَادِيْ عَنِّيْ فَاِنِّيْ قَرِيْبٌ ؕ اُجِيْبُ دَعْوَةَ الدَّاعِ اِذَا دَعَانِ ۙ فَلْيَسْتَجِيْبُوْا لِيْ وَلْيُؤْمِنُوْا بِيْ لَعَلَّهُمْ يَرْشُدُوْنَ○ (البقرة: 184 تا 187)

ಈ ವಚನಗಳ ಅನುವಾದ ಹೀಗಿದೆ: "ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗಿ ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. ಈ ಉಪವಾಸವನ್ನು ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. ಉಪವಾಸ ಮಾಡಲು ದೈಹಿಕ ನಶ್ಶಕ್ತಿಯಿದ್ದು ಆರ್ಥಿಕವಾಗಿ ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವನಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ."

"ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. ಇದು ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ."

"ಎಲೈ ಪ್ರವಾದಿ, ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ ಹೇಳು – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ."

ಅಲ್ಲಾಹನ ಅನುಗ್ರಹದಿಂದ ಈ ವರ್ಷ ನಮಗೆ ರಮಝಾನ್ ತಿಂಗಳಿಂದ ಪ್ರಯೋಜನ ಪಡೆಯಲು ಸಂದರ್ಭ ಸಿಗುತ್ತಿದೆ. ರಮಝಾನ್ ತಿಂಗಳನ್ನು

ಪಡೆದುಕೊಂಡು ಅದರಿಂದ ದಾಟಿ ಹೋಗುವುದು ಮಾತ್ರ ಸಾಕಾಗಲಿಕ್ಕಿಲ್ಲ. ಬೆಳಿಗ್ಗೆ ಸಹರೀ ಮಾಡಿಕೊಂಡು ಸಂಜೆ ಉಪವಾಸ ತೊರೆಯುವುದರಿಂದ ಮಾತ್ರ ಉಪವಾಸದ ಉದ್ದೇಶ ಪೂರ್ತಿಯಾಗುವುದಿಲ್ಲ. ಬದಲಾಗಿ, ಉಪವಾಸದ ಕಾರಣದಿಂದ ನಮ್ಮೊಳಗೆ ಪರಿಶುದ್ಧವಾದ ಒಂದು ಬದಲಾವಣೆ ಉಂಟುಮಾಡಲು ಅಲ್ಲಾಹನು ಆಜ್ಞಾಪಿಸಿದ್ದಾನೆ. ಉಪವಾಸಗಳಿಗೆ ಸಂಬಂಧಿಸಿ ಅಲ್ಲಾಹನು ನಮಗೆ ಕೆಲವು ಆದೇಶಗಳನ್ನು ನೀಡಿದ್ದಾನೆ. ಅವುಗಳ ಪರಿಣಾಮವಾಗಿ, ಅವುಗಳ ಪ್ರಕಾರ ನಡೆಯುವ ಮೂಲಕ ಅಲ್ಲಾಹನು ನಮಗೆ ಅವನ ಸಾಮೀಪ್ಯವನ್ನು ನೀಡುವುದಾಗಿಯೂ ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವುದಾಗಿಯೂ ಸುವಾರ್ತೆ ನೀಡಿರುವನು. ಅವುಗಳಲ್ಲಿ ಕೆಲವು ವಚನಗಳನ್ನು ನಾನು ಪಾರಾಯಣ ಮಾಡಿದ್ದೆ. ನಾನು ಓದಿದ ವಚನಗಳಲ್ಲಿ ಉಪವಾಸ ಇರಿಸುವುದು ಕಡ್ಡಾಯವೆಂಬುದರ ಕಡೆಗೆ ನಮ್ಮ ಗಮನವನ್ನು ಅಲ್ಲಾಹನು ಸೆಳೆದಿದ್ದಾನೆ. ಅದೇ ರೀತಿಯಲ್ಲಿ ರೋಗ ಅಥವಾ ಅನುಮತನೀಯವಾದ ಏನಾದರೂ ಕಾರಣವಿದ್ದರೆ ಉಪವಾಸ ಇರಿಸದೇ ಇದ್ದರೆ ಅದನ್ನು ಅನಂತರ ಬೇರೆ ದಿನಗಳಲ್ಲಿ ಇರಿಸಬೇಕೆಂದೂ ಹೇಳಿದ್ದಾನೆ. ದೀರ್ಘ ಕಾಲದ ರೋಗದ ಕಾರಣ ಅವುಗಳನ್ನು ಬೇರೆ ದಿನಗಳಲ್ಲೂ ಇರಿಸಲು ಸಾಧ್ಯವಿಲ್ಲದಿದ್ದರೆ ಫಿದ್‌ಯ ಕೊಡಬೇಕು. ಆದರೆ ಅನಂತರ ಉಪವಾಸ ಇರಿಸಲು ಸಾಧ್ಯವಾದರೂ ಸಹ, ಆರ್ಥಿಕವಾಗಿ ಉತ್ತಮ ನೆಲೆಯಲ್ಲಿ ಇರುವವರು ಉಪವಾಸದೊಂದಿಗೆ ಫಿದ್‌ಯ ನೀಡುವುದು ಉತ್ತಮವೇ ಆಗಿದೆ.

ಅನಂತರ ಅಲ್ಲಾಹನು ಪವಿತ್ರ ಖುರ್‌ಆನಿನ ಪ್ರಾಮುಖ್ಯತೆ ಮತ್ತು ಅದರ ಅವತೀರ್ಣದ ಬಗ್ಗೆ ಸಹ ಹೇಳಿಕೊಂಡು, ಅದನ್ನು ಓದುವುದು, ಅದರ ಪ್ರಕಾರ ನಡೆಯುವುದರಿಂದ ನಮ್ಮ ಸನ್ಮಾರ್ಗಕ್ಕೆ ಮತ್ತು ವಿಶ್ವಾಸದ ದೃಢತೆಗೆ ಕಾರಣವಾಗುವುದು ಎಂದು ಹೇಳಿದ್ದಾನೆ. ಅದು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು ಮತ್ತು ಅವನು ಕಳುಹಿಸಿದ ಶಿಕ್ಷಣವನ್ನು ಅರಿಯಲು ಇರುವ ಮಾರ್ಗವಾಗಿದೆ.

ಅದಲ್ಲದೆ, ಅವನು ಅವನ ದಾಸರ ಬಹಳ ಸಮೀಪದಲ್ಲಿರುತ್ತಾನೆ ಮತ್ತು ದಾಸರ ಪ್ರಾರ್ಥನೆಗಳನ್ನು ಆಲಿಸಿ ಅದನ್ನು ಅಂಗೀಕರಿಸುತ್ತಾನೆ ಎಂಬ ಒಂದು ಸುವಾರ್ತೆಯನ್ನು ಸಹ ಅಲ್ಲಾಹನು ಪ್ರವಾದಿಗೆ ನೀಡಿದ್ದಾನೆ. ರಮಝಾನ್ ತಿಂಗಳಲ್ಲಿ ಅಲ್ಲಾಹನು ಕೆಳಗಿನ ಆಕಾಶಕ್ಕೆ ಬರುತ್ತಾನೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಎಂದರೆ, ಅವನು ದಾಸರ ಪ್ರಾರ್ಥನೆಗಳನ್ನು ಬಹಳ ಹೆಚ್ಚಾಗಿ ಆಲಿಸಿ ಸ್ವೀಕರಿಸುತ್ತಾನೆ. ಆದರೆ ಅವನು ನಮ್ಮ ದುಆಗಳನ್ನು ಸ್ವೀಕರಿಸಬೇಕಾದರೆ, ನಾವು ಸಹ ಅವನ ಆಜ್ಞೆಗಳ ಆದೇಶಗಳ ಪ್ರಕಾರ ನಡೆಯಬೇಕು. ರಮಝಾನ್ ತಿಂಗಳಲ್ಲಿ ಮಾತ್ರವಲ್ಲ, ಬದಲಾಗಿ ಆ ಸತ್ಕರ್ಮಗಳನ್ನು ಪೂರ್ತಿ ಜೀವಿತದ ಭಾಗವನ್ನಾಗಿ ಮಾಡಬೇಕು ಮತ್ತು ನಮ್ಮ ವಿಶ್ವಾಸವನ್ನು ಸುದೃಢಗೊಳಿಸಬೇಕು. ಒಟ್ಟಿನಲ್ಲಿ, ಪ್ರಾರ್ಥನೆಗಳ ಸ್ವೀಕಾರಕ್ಕಾಗಿ ಕೆಲವು ಶರತ್ತುಗಳಿವೆ, ಆದ್ದರಿಂದ ನಾವು ಈ ನಿಬಂಧನೆಗಳ ಪ್ರಕಾರ ನಮ್ಮ ದುಆಗಳನ್ನು ಮನೋಹರವನ್ನಾಗಿ ಮಾಡುವಾಗ ಅಲ್ಲಾಹನು ಸಹ ಅವನ ಸಾಮೀಪ್ಯವನ್ನು ನಮಗೆ ನೀಡುವನು ಮತ್ತು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವನು. ಈಗ ನಾನು ದುಆಗಳಿಗೆ ಸಂಬಂಧಿಸಿ, ಅದರ ಪ್ರಾಮುಖ್ಯತೆ, ಹೇಗೆ ನಮ್ಮ ನಡೆವಳಿಕೆಗಳನ್ನು ಸರಿಪಡಿಸಬೇಕೆಂಬುದರ ಸಂಬಂಧಿಸಿ, ಪ್ರಾರ್ಥನೆಗಳ ಶರತ್ತುಗಳ ಕುರಿತು, ಅದರ ತತ್ವ ಮತ್ತು ಅದರ ಆಳವಾದ ಅರ್ಥದ ಕುರಿತು ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುವೆನು. ಸುಮ್ಮನೇ ಸಾಮಾನ್ಯ ರೀತಿಯಲ್ಲಿ ದುಆ ಮಾಡಿಕೊಂಡು ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸಲಿಲ್ಲ ಎಂದು ಹೇಳುವವರು ನಮ್ಮಲ್ಲಿ ಹಲವರು ಇದ್ದಾರೆ. ಅಲ್ಲಾಹನೊಡನೆ ಒಂದು ಕೆಲಸ ಮಾಡಲು ಹೇಳಿಕೊಂಡು ಅದನ್ನು ಅವನು ಮಾಡಬೇಕೆಂಬ ರೀತಿಯಲ್ಲಿ ಅವರು ಹೇಳಿಕೊಳ್ಳುತ್ತಾರೆ. **ನಊಧುಬಿಲ್ಲಾಹ್**. ಅವರು ಏನೇ ಹೇಳಿದರೂ, ಅವರ ಕರ್ಮಗಳು ಹೇಗೇ ಇದ್ದರೂ ಅಲ್ಲಾಹನು ಅವರ ಆದೇಶಗಳನ್ನು ಪಾಲನೆ ಮಾಡಬೇಕೆಂಬ ರೀತಿಯಲ್ಲಿ ವರ್ತಿಸುತ್ತಾರೆ. ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ: ಇದು ಆಗಲಿಕ್ಕಿಲ್ಲ. ಮೊದಲು ಮನುಷ್ಯನು ಅಲ್ಲಾಹನ ಮಾತುಗಳನ್ನು ಅಂಗೀಕರಿಸಬೇಕು, ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ನಮ್ಮ ನಡೆವಳಿಕೆಗಳನ್ನು ಸರಿಪಡಿಸಬೇಕು. ರಮಝಾನ್ ತಿಂಗಳಲ್ಲಿ ಸತ್ಕರ್ಮಗಳ ಒಂದು ವಾತಾವರಣ ಉಂಟಾಗಿರುವಾಗ, ದರ್ಸ್‌ಗಳ ಪರಂಪರೆ ಶುರುವಾಗಿರುವಾಗ, ಅಲ್ಲಾಹನ ನಿರ್ದೇಶನಗಳು ಮತ್ತು ಆದೇಶಗಳನ್ನು ನೋಡಿಕೊಂಡು, ಅದನ್ನು ಗಮನವಿಟ್ಟು ಕೇಳಿಕೊಂಡು ಅವುಗಳ ಪ್ರಕಾರ ನಡೆಯಲು ಪ್ರಯತ್ನಿಸಬೇಕು. ನಮ್ಮ ವಿಶ್ವಾಸ ಎಷ್ಟು ದೃಢವಾಗಿದೆ ಎಂದು ನಮ್ಮ ವಿಶ್ವಾಸದ ಬಗ್ಗೆ ಅವಲೋಕನ ನಡೆಸಬೇಕು. ಯಾವುದಾದರೂ ಕಷ್ಟದಲ್ಲಿ ಸಿಲುಕುವಾಗ, ಯಾವುದಾದರೂ ಪರೀಕ್ಷಣೆಗೆ ಒಳಪಡುವಾಗ ವಿಶ್ವಾಸ ಅಸ್ಥಿರವಾಗುತ್ತಿದೆಯೇ ಎಂದು ನೋಡಬೇಕು. ದುಆ ಸ್ವೀಕಾರದ ಕುರಿತು ನೆನಪಿಡಬೇಕಾದ ಸಂಗತಿಯೇನೆಂದರೆ, ಮೊದಲ ಹೆಜ್ಜೆಯಿಡುವಿಕೆ ದಾಸನ ಕಡೆಯಿಂದ ಆಗಿರಬೇಕು. ಅದು ಅದರ ಎಲ್ಲೆಯನ್ನು ತಲುಪುವಾಗಲೇ ಅಲ್ಲಾಹನ ಕರುಣೆ ಮತ್ತು ಕೃಪೆ ಶಕ್ತವಾಗಿ ಹೊರಹೊಮ್ಮುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳುತ್ತಾರೆ: "ದುಆ ಎಂಬುದು ಇಸ್ಲಾಮಿನ ವಿಶಿಷ್ಟ ಹೆಮ್ಮೆಯ ಸಂಗತಿಯಾಗಿದೆ. ಮುಸ್ಲಿಮರಿಗೆ ಇದರ ಬಗ್ಗೆ ಬಹಳ ಅಭಿಮಾನವಿದೆ. ಪ್ರಾರ್ಥನೆ ಎಂಬುದು ಬರೀ ಅಸಂಬದ್ಧ ಮಾತಿನ ಹೆಸರಲ್ಲ. ಬದಲಾಗಿ, ಅದು ಹೃದಯವನ್ನು ಅಲ್ಲಾಹನ ಭಯದಿಂದ ತುಂಬಿಸುವ, ಆತ್ಮವನ್ನು ನೀರಿನಂತೆ ಹರಿಸಿಕೊಂಡು ದೇವಸನ್ನಿಧಿಯಲ್ಲಿ ಸಮರ್ಪಿಸುವ ಸಂಗತಿಯಾಗಿದೆ ಮತ್ತು ತನ್ನ ದೌರ್ಬಲ್ಯಗಳು ಮತ್ತು ತಪ್ಪುಗಳ ಕಾರಣದಿಂದ ಅಲ್ಲಾಹನಿಂದ ಶಕ್ತಿ, ಸಾಮರ್ಥ್ಯ ಮತ್ತು ಕ್ಷಮೆ ಯಾಚನೆ ಮಾಡುವುದನ್ನು ದುಆ ಎಂದು ಹೇಳಲಾಗುತ್ತದೆ. ಈ ಸ್ಥಿತಿಯನ್ನು ಒಂದು ಅರ್ಥದಲ್ಲಿ ಮರಣವೆಂದು ಹೇಳಬಹುದು. ಈ ಅವಸ್ಥೆ ಉಂಟಾದರೆ, ಖಂಡಿತವಾಗಿಯೂ ದುಆ ಸ್ವೀಕಾರದ ಬಾಗಿಲು ತೆರೆಯಲಾಗುವುದು ಎಂದು ತಿಳಿಯಬೇಕು. ಆಗ ವಿಶೇಷ ಶಕ್ತಿ, ಅನುಗ್ರಹ ಮತ್ತು ಸ್ಥೈರ್ಯವು ತಪ್ಪುಗಳಿಂದ ರಕ್ಷಣೆ ಪಡೆಯಲು ಮತ್ತು ಸತ್ಕರ್ಮಗಳ ಮೇಲೆ ಸ್ಥಿರವಾಗಿ ನಿಲ್ಲಲು ಲಭಿಸುತ್ತದೆ. ಈ ಮಾರ್ಗ ಎಲ್ಲಕ್ಕಿಂತ ಪ್ರಬಲವಾಗಿರುತ್ತದೆ." (ಮಲ್‌ಫೂಝಾತ್, ಸಂಪುಟ–7, ಪುಟ–263, ಮುದ್ರಣ 1984)

ಒಟ್ಟಿನಲ್ಲಿ ಇದಾಗಿದೆ ದುಆದ ವಿಧಾನ. ಅಲ್ಲಾಹನ ಸಾಮೀಪ್ಯ ಗಳಿಸಲು ಇರುವ ಮಾರ್ಗ, ದುಆ ಸ್ವೀಕಾರ ಮಾಡಿಸುವ ಮಾರ್ಗ ಮತ್ತು ಪಾಪಗಳಿಂದ ವಿಮುಕ್ತಗೊಳಿಸುವ ಮಾರ್ಗ. ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಮತ್ತು ಅಲ್ಲಾಹನು ನಮ್ಮೊಂದಿಗೆ ಸಂಪ್ರೀತನಾಗಿದ್ದಾನೆ ಎಂದು ನಮಗೆ ಹೇಗೆ ಗೊತ್ತಾಗುವುದು ಎಂಬ ಪ್ರಶ್ನೆ ಇತ್ತೀಚಿಗೆ ಮುಖ್ಯವಾಗಿ ಕೇಳಲಾಗುತ್ತದೆ. ಇಲ್ಲಿ ಈ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಒಂದು ಮೂಲಭೂತ ಸಂಗತಿಯನ್ನು ಸಹ ಹೇಳಿದ್ದಾರೆ. ಅದೇನೆಂದರೆ, ಅಲ್ಲಾಹನೊಂದಿಗೆ ಯಥಾರ್ಥ ಮತ್ತು ಸ್ಥಿರವಾದ ಸಂಬಂಧವನ್ನು ಮನುಷ್ಯನು ಸರಿಯಾದ ಪ್ರಯತ್ನದ ಮೂಲಕ ಸ್ಥಾಪಿಸುವನಾದರೆ, ಪಾಪಗಳಿಂದ ಸ್ಥಿರವಾಗಿ ರಕ್ಷಣೆ ಪಡೆಯುವಂತೆ ಅಲ್ಲಾಹನು ಅನುಗ್ರಹಿಸುತ್ತಾನೆ. ಮನುಷ್ಯನು ಪಾಪಗಳಿಂದ ರಕ್ಷಣೆ ಪಡೆಯುತ್ತಾನೆ ಎಂದು ಮಾತ್ರವಲ್ಲ, ಸ್ಥಿರವಾಗಿ ಸತ್ಕರ್ಮಗಳನ್ನು ಮಾಡುವ ಶಕ್ತಿ ಲಭಿಸುತ್ತದೆ. ಇದು ಇಲ್ಲದೇ ಅಲ್ಲಾಹನು ಸಾಮೀಪ್ಯವನ್ನು ಗಳಿಸಿದ್ದೇನೆ ಎಂದು ಒಬ್ಬ ವ್ಯಕ್ತಿಗೆ ಹೇಳಲು ಸಾಧ್ಯವಲ್ಲ. ಒಟ್ಟಿನಲ್ಲಿ, ಈ ರೀತಿಯಲ್ಲಿ ಯೋಚಿಸುವಾಗ ಮತ್ತು ಅದರ ಪ್ರಕಾರ ನಡೆಯುವಾಗಲೇ ಮನುಷ್ಯನನ್ನು ಯಥಾರ್ಥ ಆರಾಧಕನೆಂದು ಕರೆಯಬಹುದಾಗಿದೆ. ಅದಕ್ಕಾಗಿ ನಾವು ಈ ರಮಝಾನ್ ತಿಂಗಳಲ್ಲಿ ಪ್ರಯತ್ನ ಸಹ ಮಾಡಬೇಕು. ನಾನು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ. ದುಆ ಸ್ವೀಕಾರದ ವಿಷಯವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳುತ್ತಾರೆ: ಸತ್ಯದಲ್ಲಿ, ದುಆ ಸ್ವೀಕಾರದ ವಿಷಯ ದುಆದ ಒಂದು ಶಾಖೆಯಾಗಿದೆ. ಒಂದು ಸಂಗತಿಯ ಪ್ರಧಾನ ಭಾಗವನ್ನು ಅರಿಯದ ವ್ಯಕ್ತಿಗೆ ಅದರ ಶಾಖೆಯನ್ನು ಅರಿಯಲು ಕಷ್ಟವಾಗುತ್ತದೆ. ಯಾವುದೇ ಸಂಗತಿಯನ್ನು ಅರಿಯಲು ಅದರ ಮೂಲವನ್ನು ಅರಿಯುವ ಆವಶ್ಯಕತೆಯಿದೆ. ಅದರ ಪ್ರಧಾನ ಸಂಗತಿಯನ್ನು ಅರಿಯದೇ ಅದರ ವ್ಯಾಖ್ಯಾನಗಳು ಎಷ್ಟೇ ಇದ್ದರು ಅರಿಯಲು ಸಾಧ್ಯವಲ್ಲ. ದುಆದ ನಿಜಸ್ಥಿತಿಯೇನೆಂದರೆ, ಅದು ಒಬ್ಬ ಸಾತ್ವಿಕನಾದ ದಾಸ ಮತ್ತು ಅವನ ಪರಿಪಾಲಕನಾದ ಅಲ್ಲಾಹನ ನಡುವೆಯಿರುವ ಪರಸ್ಪರ ಆಕರ್ಷಣೆಯ ಒಂದು ಸಂಬಂಧವಾಗಿದೆ. ಎಂದರೆ ಮೊದಲು ಅಲ್ಲಾಹನ ರಹ್ಮಾನಿಯ್ಯತ್ ಎಂಬ ಕೃಪೆ ದಾಸನನ್ನು ತನ್ನೆಡೆಗೆ ಸೆಳೆಯುತ್ತದೆ. ಅನಂತರ ದಾಸನ ಸತ್ಯಸಂಧತೆಯ ಆಕರ್ಷಣೆಯಿಂದ ಅಲ್ಲಾಹನು ಅವನ ಸಮೀಪವಾಗುತ್ತಾನೆ. ಸತ್ಯಸಂಧತೆ ಮತ್ತು ಸತ್ಯ ಹೃದಯದೊಂದಿಗೆ ದಾಸನು ಪ್ರಯತ್ನ ಮಾಡಿದರೆ ಅಲ್ಲಾಹನು ಅವನ ಸಮೀಪವಾಗುತ್ತಾನೆ ಮತ್ತು ದುಆದ ಸ್ಥಿತಿಯಲ್ಲಿ ಈ ಸಂಬಂಧ ಒಂದು ವಿಶೇಷವಾದ ಮಟ್ಟವನ್ನು ತಲುಪಿ ತನ್ನ ವಿಶಿಷ್ಟವಾದ ವಿಸ್ಮಯವನ್ನು ಉಂಟುಮಾಡುತ್ತದೆ. ವಿಸ್ಮಯಕರವಾದ ವಿಶೇಷತೆಗಳು ಪ್ರಕಟವಾಗುತ್ತವೆ. ದಾಸನು ಯಾವುದಾದರೂ ಕಠಿಣವಾದ ಕಷ್ಟತೆಗೆ ಈಡಾಗಿ ಅಲ್ಲಾಹನ ಕಡೆಗೆ ಪರಿಪೂರ್ಣವಾದ ದೃಢವಿಶ್ವಾಸ, ಸಮಗ್ರವಾದ ಪ್ರೇಮ, ನಿಷ್ಠೆ ಮತ್ತು ಪೂರ್ಣ ಧೈರ್ಯದಿಂದ ಬಾಗಿಕೊಂಡು, ಬಹಳ ಎಚ್ಚರಿಕೆಯಿಂದ ಅಜಾಗರೂಕತೆ ಮತ್ತು ಅಸಡ್ಡೆಯ ಪರದೆಗಳನ್ನು ಸೀಳಿಕೊಂಡು ಸಮರ್ಪಣೆಯ ಮೈದಾನದಲ್ಲಿ ಮುಂದಕ್ಕೆ ಸಾಗುವಾಗ ಹಾಗೂ ದೇವನ ದರ್ಬಾರಿನಲ್ಲಿ ಅವನ ಆತ್ಮ ಅಲ್ಲಾಹನ ಸನ್ನಿಧಿಯಲ್ಲಿ ತಲೆಯಿರಿಸುವಾಗ ಅವನೊಳಗೆ ಇರುವ ಆಕರ್ಷಣೆಯ ಶಕ್ತಿಯು ಅಲ್ಲಾಹನ ವರದಾನಗಳನ್ನು ತನ್ನೆಡೆಗೆ ಸೆಳೆಯುತ್ತದೆ. ಹೀಗೆ ಅಲ್ಲಾಹನು ತನ್ನ ಕೆಲಸವನ್ನು ಪೂರ್ತಿ ಮಾಡುವ ಕಡೆಗೆ ಗಮನವಹಿಸುತ್ತಾನೆ. ಅವನ ದುಆದ ಪ್ರಭಾವವನ್ನು, ಅದು ಸ್ವೀಕಾರವಾಗಲು ಬೇಕಾಗಿರುವ ಮತ್ತು ಆ ಕೆಲಸ ನಡೆಯಲು ಬೇಕಾಗಿರುವ ಎಲ್ಲ ವಸ್ತುಗಳ ಮೇಲೆ ಹಾಕುತ್ತಾನೆ. ಹೀಗೆ ಅದಕ್ಕೆ ಆವಶ್ಯವಿರುವ ಸಂಗತಿಗಳು ಉಂಟಾಗುತ್ತವೆ.

ಉದಾಹರಣೆಗೆ ಮಳೆ ಬರಿಸಲಿಕ್ಕಾಗಿ ದುಆ ಮಾಡಿರುವುದಾದರೆ, ಅದು ಸ್ವೀಕಾರವಾಗುವ ವೇಳೆ ಮಳೆ ಬರಿಸಲು ಬೇಕಾದ ಪ್ರಾಕೃತಿಕ ವಾತಾವರಣ ಆ ದುಆದ ಮಾಡಿದ ಕಾರಣದಿಂದ ಅಲ್ಲಾಹನು ಉಂಟುಮಾಡುತ್ತಾನೆ. ಬರಗಾಲ ಉಂಟುಮಾಡಲು ಶಾಪ ಪ್ರಾರ್ಥನೆ ಮಾಡಿರುವುದಾದರೆ, ಅಲ್ಲಾಹನು ಅದು ಉಂಟುಮಾಡಲು ಬೇಕಾದ ಕಾರ್ಯಗಳನ್ನು ಸಿದ್ಧಪಡಿಸುತ್ತಾನೆ. ಪ್ರವಾದಿಗಳಿಂದ ಪ್ರಕಟವಾದ ಸಾವಿರಾರು ಅದ್ಭುತ ದೃಷ್ಟಾಂತಗಳು ಅಥವಾ ಅಲ್ಲಾಹನ ಗೌರವಾನ್ವಿತ ವರಿಷ್ಠ ದಾಸರು ಇಂದಿನ ತನಕ ತೋರಿಸಿದ ವಿಸ್ಮಯಕರವಾದ ಸಂಗತಿಗಳ ಮತ್ತು ಮಹಿಮೆಗಳ ಮೂಲ ಮತ್ತು ಉಗಮ ಇದೇ ದುಆ ಆಗಿದೆ.

(ಬರಕಾತುದ್ದುಆ, ರುಹಾನಿ ಖಝಾಇನ್, ಸಂಪುಟ–6, ಪುಟ–9–10)

ಪವಿತ್ರ ಖುರ್ಆನ್ ಅಸಂಖ್ಯಾತ ಭವಿಷ್ಯವಾಣಿಗಳಿಂದ ತುಂಬಿವೆ. ಹಝ್ರತ್ ಮಸೀಹ್ ಮೌಊದ್(ಅ) ಕಾಲದಲ್ಲೂ ಹಲವಾರು ಭವಿಷ್ಯವಾಣಿಗಳು ಈಡೇರಿದುವು. ಹಲವಾರು ಸಾತ್ವಿಕರು ಒಳ್ಳೆಯ ಕನಸುಗಳನ್ನು ಕಾಣುತ್ತಾರೆ ಮತ್ತು ಅವು ಈಡೇರುತ್ತವೆ. ಹೀಗೆ ದುಆಗಳ ಪ್ರಭಾವ ಪ್ರಕಟವಾಗುತ್ತವೆ. ಇವೆಲ್ಲವೂ ದಾಸನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಅಲ್ಲಾಹನ ಮುಂದೆ ಬಾಗುವಾಗಲೇ ಉಂಟಾಗುತ್ತವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **ವಲ್ಲದ್ದೀನ ಜಾಹದೂ ಫೀನಾ ಲನಹ್ದಿಯನ್ನಹುಂ ಸುಬುಲನಾ** ಎಂದು ಅಲ್ಲಾಹನು ಹೇಳಿದ್ದಾನೆ. ಎಂದರೆ ನಮ್ಮ ಮಾರ್ಗದಲ್ಲಿ ಪ್ರಯತ್ನ ಮಾಡುವವನಿಗೆ ನಾವು ನಮ್ಮ ಮಾರ್ಗವನ್ನು ತೋರಿಸುವೆವು. ಪ್ರಯತ್ನದ ಜವಾಬ್ದಾರಿಯನ್ನು ದಾಸನಿಗೆ ನೀಡಲಾಗಿದೆ. ನಾವು ಪ್ರಯತ್ನ ಮಾಡಬೇಕು. ಒಂದು ಕಡೆ ದುಆ ಸ್ವೀಕರಿಸುವುದಾಗಿ ವಾಗ್ದಾನ ಮಾಡಿದ್ದಾನೆ ಮತ್ತೊಂದೆಡೆ **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ಪ್ರಾರ್ಥನೆಯನ್ನು ಕಲಿಸಿಕೊಟ್ಟಿದ್ದಾನೆ. ಎಂದರೆ ಒಂದೆಡೆ ನಿಷ್ಠೆಯಿಂದ ದುಆ ಮಾಡಿದರೆ ನಾವು ನಮ್ಮ ಮಾರ್ಗಗಳನ್ನು ತೋರಿಸುವೆವು ಎಂದು ವಾಗ್ದಾನ ಮಾಡಿರುವನು ಮತ್ತೊಂದೆಡೆ **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ದುಆ ಸಹ ಕಲಿಸಿಕೊಟ್ಟನು. ಆದ್ದರಿಂದ ಮನುಷ್ಯನು ಈ ಸಂಗತಿಯನ್ನು ಮುಂದಿರಿಸಿಕೊಂಡು ನಮಾಝಿನಲ್ಲಿ ದೃಢನಿರ್ಧಾರದೊಂದಿಗೆ ಮತ್ತು ನಡುಗುತ್ತಾ ದುಆ ಮಾಡಬೇಕು ಮತ್ತು ಆಧ್ಯಾತ್ಮಿಕ ಅಭಿವೃದ್ಧಿ ಮತ್ತು ದಿವ್ಯದೃಷ್ಟಿಯನ್ನು ಪಡೆದ ವಿಶಿಷ್ಟ ವ್ಯಕ್ತಿಗಳಂತೆ ಆಗಲು ಬಯಸಬೇಕು. ಆಧ್ಯಾತ್ಮಿಕ ದೃಷ್ಟಿಯಿಲ್ಲದೇ ಕುರುಡನಾಗಿ ಪರಲೋಕಕ್ಕೆ ಹೋಗುವಂತೆ ಆಗಬಾರದು. ಎಂದರೆ ಯಾರು ಇಹಲೋಕದಲ್ಲಿ ಭೌತಿಕ ಕಾರ್ಯಗಳಲ್ಲಿ ಮುಳುಗಿರುವರೋ, ಯಾರು ಅಲ್ಲಾಹನನ್ನು ಅರಿಯಲಿಲ್ಲವೋ, ಯಾರು ದುಆದ ಯುಕ್ತಿಯನ್ನು ಅರಿಯಲಿಲ್ಲವೋ, ಯಾರು ದುಆಗಳ ಪ್ರಭಾವವನ್ನು ಅರಿಯಲಿಲ್ಲವೋ ಅಂತಹ ಜನರು ಪರಲೋಕದಲ್ಲೂ ಅಲ್ಲಾಹನ ಸಾಮೀಪ್ಯವನ್ನು ಗಳಿಸಲಾರರು. ಒಟ್ಟಿನಲ್ಲಿ ಪರಲೋಕಕ್ಕಿರುವ ತಯಾರಿ ಮತ್ತು ಸಿದ್ಧತೆ ಈ ಲೋಕದಿಂದಲೇ ನಡೆಯಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಹೆಚ್ಚಾಗಿ ದುಆಗಳ ಪ್ರಭಾವದಿಂದಲೇ ಸರ್ವಶಕ್ತನಾದ ಅಲ್ಲಾಹನ ವತಿಯಿಂದ ವಿವಿಧ ರೀತಿಯ ಅಸಾಮಾನ್ಯವಾದ ಮತ್ತು ಮನುಷ್ಯನಿಗೆ ಅತೀತವಾದ ಘಟನೆಗಳು ಘಟಿಸುತ್ತವೆ.

ಅಲ್ಲಾಹನ ಸಾಮೀಪ್ಯ ಸಿಗುವಂತಹ ಪರಲೋಕವನ್ನು ನೋಡಲು ಇಹಲೋಕದಿಂದಲೇ ನಾವು ಕಣ್ಣುಗಳನ್ನು ಕೊಂಡುಹೋಗಬೇಕಾಗಿದೆ. ಅಲ್ಲಾಹನು ವಾಗ್ದಾನ ಮಾಡಿಕೊಂಡು ಅದನ್ನು ಈಡೇರಿಸದೇ ಇರುವನೇ? ಖಂಡಿತವಿಲ್ಲ. ಆಧ್ಯಾತ್ಮಿಕ ಅರಿವು ಮತ್ತು ಆಧ್ಯಾತ್ಮಿಕ ಅಭಿರುಚಿಯನ್ನು ಪಡೆಯದ ವ್ಯಕ್ತಿಯನ್ನು ಕುರುಡನೆಂದು ಇಲ್ಲಿ ಉದ್ದೇಶಿಸಲಾಗಿದೆ. ಒಬ್ಬ ವ್ಯಕ್ತಿ ಕುರುಡನಂತೆ ಮುಸ್ಲಿಮನ ಮನೆಯಲ್ಲಿ ಹುಟ್ಟಿದ ಕಾರಣದಿಂದ ಮುಸ್ಲಿಮನಾಗುತ್ತಾನೆ. ಅಂಧವಾದ ವಿಶ್ವಾಸವನ್ನು ಹೊಂದಿರುತ್ತಾನೆ. ಯಾವುದೇ ಸತ್ಕರ್ಮವನ್ನು ಮಾಡುವುದಿಲ್ಲ. ಇನ್ನೊಬ್ಬ ವ್ಯಕ್ತಿ ಕ್ರೈಸ್ತನ ಮನೆಯಲ್ಲಿ ಹುಟ್ಟಿಕೊಂಡು ಕ್ರೈಸ್ತನಾಗುತ್ತಾನೆ. ಇದೇ ಕಾರಣದಿಂದ ಇಂತಹ ವ್ಯಕ್ತಿಗೆ ಅಲ್ಲಾಹನ ಮತ್ತು ಅವನ ಪ್ರವಾದಿಗಳ ಮೇಲೆ ಯಾವುದೇ ಬೆಲೆಯಿರುವುದಿಲ್ಲ. ಅವನಿಗೆ ಧರ್ಮದೊಂದಿಗೆ ಇರುವ ಪ್ರೇಮ ಸಹ ಆಕ್ಷೇಪಾರ್ಹವಾಗಿರುತ್ತದೆ. ಪ್ರವಾದಿಗಳನ್ನು ನಿಂದನೆ ಮಾಡುವವರೊಂದಿಗೆ ಅವನ ಆಗುಹೋಗುಗಳು ಇರುತ್ತವೆ. ಅದಕ್ಕೆ ಕಾರಣ ಅವನಿಗೆ ಆಧ್ಯಾತ್ಮಿಕ ಕಣ್ಣಿಲ್ಲವೆಂಬುದೇ ಆಗಿದೆ. ಅವನಿಗೆ ಧರ್ಮದೊಂದಿಗೆ ಪ್ರೀತಿಯಿರುವುದಿಲ್ಲ. ನಾವು ಧರ್ಮವನ್ನು ಸ್ವೀಕರಿಸಲು ಸಿದ್ಧರಾಗಿದ್ದರೆ, ನಮಗೆ ಧರ್ಮವನ್ನು ನೀಡಲು ಅಲ್ಲಾಹನು ತಯಾರಾಗಿದ್ದಾನೆ ಎಂದು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ ಈ ದುಆ ಮಾಡುವುದೇ ಸನ್ಮಾರ್ಗವನ್ನು ಪಡೆಯಲಿರುವ ಸಿದ್ಧತೆಯಾಗಿದೆ. ಈ ದಿನಗಳಲ್ಲಿ **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂದರೆ, ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು ಎಂಬ ಪ್ರಾರ್ಥನೆಯನ್ನು ಬಹಳವಾಗಿ ಮಾಡಬೇಕು. ಅಲ್ಲಾಹನು ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸಲಿ, ಹೃದಯಗಳನ್ನು ಪರಿಶುದ್ಧಗೊಳಿಸಿಕೊಂಡು ನೈಜವಾದ ಆರಾಧಕರಾದ ದಾಸರನ್ನಾಗಿ ಮಾಡಲಿ, ಅಲ್ಲಾಹನ ಇತರ ದಾಸರ ಹಕ್ಕುಗಳನ್ನು ಈಡೇರಿಸುವವರನ್ನಾಗಿ ಮಾಡಲಿ. ಇಂದು ಉಗ್ರವಾದಿಗಳು ಮಾಡುವಂತೆ ಮಾಡುವವರಾಗದಿರಲಿ. ಅವರು ಅಲ್ಲಾಹನ ಮತ್ತು ಪ್ರವಾದಿಯ ಹೆಸರಲ್ಲಿ ದೌರ್ಜನ್ಯಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ. ಅಲ್ಲಾಹನು ದೌರ್ಜನ್ಯಗಾರರ ಉಪದ್ರದಿಂದ ಪ್ರತಿಯೊಬ್ಬರನ್ನು ಸಂರಕ್ಷಿಸಲಿ.

ನಾವು ಎಷ್ಟು ದೊಡ್ಡ ಪಾಪಿಗಳಾಗಿದ್ದೇವೆ ಎಂದರೆ ಅಲ್ಲಾಹನು ನಮ್ಮನ್ನು ಕ್ಷಮಿಸಲಿಕ್ಕಿಲ್ಲವೆಂದು ಕೆಲವರು ಹೇಳುತ್ತಾರೆ. ಇನ್ನು ನಾವು ಕ್ಷಮಿಸಲ್ಪಡಲಾರೆವು ಎಂದು ಹೇಳಿಕೊಂಡು ಇನ್ನೂ ಹೆಚ್ಚು ಪಾಪಗಳನ್ನು ಮಾಡುತ್ತಾರೆ. ಸತ್ಯದಲ್ಲಿ ಶೈತಾನನು ಇಂತಹ ಸಂಶಯಗಳನ್ನು ಹುಟ್ಟಿಸುತ್ತಾನೆ ಮತ್ತು ಕಿವಿಗಳಲ್ಲಿ ಈ ರೀತಿಯಲ್ಲಿ ಪಿಸುಗುಟ್ಟುತ್ತಾನೆ. ಅಲ್ಲಾಹನಿಂದ ದಾಸನನ್ನು ದೂರಮಾಡಿಸಲು ಶೈತಾನನು ಈ ರೀತಿಯ ಸಂಗತಿಗಳನ್ನು ಮನಸ್ಸಿನಲ್ಲಿ ಹುಟ್ಟಿಸುತ್ತಾನೆ. ಇಂತಹ ಜನರು ಶೈತಾನನ ಕೈಗಳಲ್ಲಿ ಆಟವಾಡುತ್ತಿರುತ್ತಾರೆ. ಆದರೆ ಶೈತಾನನ ಈ ದಾಳಿಯಿಂದ ರಕ್ಷಣೆ ಪಡೆಯುವ ವಿಧಾನವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಪಾಪಿಯು ತಾನು ಮಾಡಿರುವ ಪಾಪಗಳ ಆಧಿಕ್ಯದ ಬಗ್ಗೆ ಆಲೋಚಿಸಿಕೊಂಡು ಪ್ರಾರ್ಥನೆ ಮಾಡುವುದರಿಂದ ಬಿಟ್ಟುನಿಲ್ಲಬಾರದು. ದುಆ ಶಮನೌಷಧಿಯಾಗಿದೆ. ಪಾಪಗಳು ಎಷ್ಟು ಕೆಟ್ಟದು ಎಂದು ದುಆಗಳನ್ನು ಮಾಡುವುದರಿಂದ ಗೊತ್ತಾಗುವುದು. ಪಾಪಗಳಿಂದ ರಕ್ಷಣೆ ಹೊಂದಲು ಇರುವ ಮಾರ್ಗ ಪ್ರಾರ್ಥನೆಯೇ ಆಗಿದೆ. ಯಾರು ಪಾಪಗಳಲ್ಲಿ ಮುಳುಗಿಕೊಂಡು ದುಆ ಸ್ವೀಕಾರದ ಬಗ್ಗೆ ನಿರಾಶೆಹೊಂದುತ್ತಾನೋ ಮತ್ತು ಪಶ್ಚಾತ್ತಾಪ ಮಾಡುವುದಿಲ್ಲವೋ ಅವರು ಕೊನೆಗೆ ಪ್ರವಾದಿಗಳನ್ನು ಮತ್ತು ಅವರ ಪ್ರಭಾವಗಳನ್ನು ಕೂಡ ನಿಷೇಧಿಸುತ್ತಾರೆ. (ಮಲ್‌ಫ಼ೂಝಾತ್, ಸಂಪುಟ–1, ಪುಟ–4–5, ಮುದ್ರಣ 1984)

ಅನಂತರ ಅವರು ಧರ್ಮದಿಂದ ದೂರವಾಗುತ್ತಾರೆ. ಅನಂತರ ನಾಸ್ತಿಕರಾಗುತ್ತಾರೆ. ಒಟ್ಟಿನಲ್ಲಿ ಪಾಪಗಳಲ್ಲಿ ಮುಳುಗಿರುವವರಿಗೂ ಅಲ್ಲಾಹನು ಪ್ರತೀಕ್ಷೆಯ ಕಿರಣವನ್ನು ತೋರಿಸುತ್ತಾನೆ. ಪಾಪಗಳಿಂದ ಪಶ್ಚಾತ್ತಾಪ ಮಾಡಿಕೊಳ್ಳಲು ಅಲ್ಲಾಹನು ರಮಝಾನ್ ತಿಂಗಳ ಮೂಲಕ ಪ್ರತಿವರ್ಷ ಅವಕಾಶ ಕೊಡುತ್ತಾನೆ. ಅದಕ್ಕಿರುವ ವಾತಾವರಣವನ್ನು ಉಂಟುಮಾಡುತ್ತಾನೆ. ಆದ್ದರಿಂದ ಈ ತಿಂಗಳಿಂದ ಪ್ರಯೋಜನ ಪಡೆಯಬೇಕು. ತನಗೆ ಲಭಿಸಿದ ಇಲ್‌ಹಾಂ ಆದ **ಉಜೀಬು ಕುಲ್ಲ ದುಆಇಕ** ಎಂದರೆ, "ನಿನ್ನ ಎಲ್ಲ ದುಆಗಳನ್ನು ಅಂಗೀಕರಿಸಲಾಗುವುದು" ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **ಉಜೀಬು ಕುಲ್ಲ ದುಆಇಕ** ಎಂದರೆ, "ನಿನ್ನ ಎಲ್ಲ ದುಆಗಳನ್ನು ಅಂಗೀಕರಿಸಲಾಗುವುದು" ಎಂದು ನನ್ನ ಪ್ರಭು ನನ್ನೊಡನೆ ಸ್ಪಷ್ಟವಾಗಿ ವಾಗ್ದಾನ ಮಾಡಿದ್ದಾನೆ. ಯಾವ ದುಆಗಳನ್ನು ಅಂಗೀಕರಿಸದೇ ಇರುವುದರಿಂದ ಹಾನಿಯುಂಟಾಗುವುದೋ ಅವುಗಳನ್ನು ಮಾತ್ರ ಇಲ್ಲಿ "ಎಲ್ಲ ದುಆ" ಎಂಬುದರಿಂದ ಉದ್ದೇಶಿಸಲಾಗಿದೆ. ಅಲ್ಲಾಹನು ಅಭಿವೃದ್ಧಿ ಮತ್ತು ಸುಧಾರಣೆಯನ್ನು ಇಚ್ಛಿಸುವಾಗ ಕೆಲವು ದುಆಗಳನ್ನು ರದ್ದುಗೊಳಿಸುವುದನ್ನೇ ದುಆ ಸ್ವೀಕಾರವಾಗಿ ಪರಿಗಣಿಸಲಾಗುವುದು. ಕೆಲವು ವೇಳೆ ಮನುಷ್ಯನ ದುಆ ಅಂಗೀಕರಿಸಲ್ಪಡುವುದಿಲ್ಲ. ಅಲ್ಲಾಹನು ಅದನ್ನು ರದ್ದುಮಾಡಿದ್ದನು ಎಂದು ಅವನು ಭಾವಿಸುತ್ತಾನೆ. ಆದರೆ ಅಲ್ಲಾಹನು ಆ ದುಆವನ್ನು ಆಲಿಸಿರುತ್ತಾನೆ. ರದ್ದು ಮಾಡುವುದರ ರೂಪದಲ್ಲಿ ಅದು ಅಂಗೀಕರಿಸಲ್ಪಟ್ಟಿರುತ್ತದೆ. ಮನುಷ್ಯನ ದೃಷ್ಟಿ ದುರ್ಬಲವಾಗಿರುತ್ತದೆ. ಅವನಿಗೆ ದೂರದೃಷ್ಟಿಯಿರುವುದಿಲ್ಲ. ಹೊರಗಿರುವುದನ್ನು ಮಾತ್ರ ಕಾಣುತ್ತಾನೆ. ಆದ್ದರಿಂದ ದುಆ ಮಾಡಿ ಅದು ಪ್ರಯೋಜನವಿಲ್ಲದ್ದಾಯಿತು, ಅಲ್ಲಾಹನು ನನ್ನ ಪ್ರಾರ್ಥನೆಯನ್ನು ಅಂಗೀಕರಿಸಲಿಲ್ಲವೆಂದು ಅಲ್ಲಾಹನ ಮೇಲೆ ಸಂಶಯಪಡಬಾರದು. ಅಲ್ಲಾಹನು ಎಲ್ಲ ಪ್ರಾರ್ಥನೆಯನ್ನು ಆಲಿಸಿರುತ್ತಾನೆ. ಇದರ ರಹಸ್ಯವೇನೆಂದರೆ, ದುಆ ಮಾಡುವವನ ಒಳಿತು ಅಂತಹ ದುಆಗಳನ್ನು ರದ್ದುಗೊಳಿಸುವುದರಲ್ಲಿ ಇರುತ್ತದೆ.

ಇದೇ ಸಂಗತಿಯನ್ನು ಇನ್ನೂ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಭಯವನ್ನು ನೋಡಿಕೊಂಡು ಅಥವಾ ನಮ್ಮ ಅಭಿಲಾಷೆ ಪ್ರಕಾರ ಅವುಗಳಿಗೆ ವಿಧೇಯನಾಗಿಕೊಂಡು ಅಲ್ಲಾಹನು ನಮ್ಮ ದುಆಗಳನ್ನು ಸ್ವೀಕರಿಸಬೇಕೆಂದೇನಿಲ್ಲ ಎಂಬುದೇ ದುಆದ ತತ್ವವಾಗಿದೆ. ನೋಡಿರಿ, ತಾಯಿಗೆ ಮಗುವಿನೊಡನೆ ಎಷ್ಟು ವಾತ್ಸಲ್ಯವಿರುತ್ತದೆ ಮತ್ತು ಮಗುವಿಗೆ ಯಾವುದೇ ರೀತಿಯ ತೊಂದರೆ ಇರಬಾರದು ಎಂದು ಬಯಸುತ್ತಾಳೆ. ಆದರೆ ಮಗು ಅನಾವಶ್ಯಕವಾಗಿ ಹಠಮಾಡಿಕೊಂಡು ಚಾಕುವನ್ನು ಅಥವಾ ಬೆಂಕಿಯ ಕೆಂಡವನ್ನು ಕೇಳಿದರೆ, ತಾಯಿಗೆ ಮಗುವಿನೊಡನೆ ಪ್ರೀತಿಯಿದ್ದರೂ ಮಗುವಿಗೆ ಬೆಂಕಿಯ ಕೆಂಡ ಅಥವಾ ಕತ್ತಿಯನ್ನು ಕೊಟ್ಟು ಮಗುವಿನ ಕೈಯನ್ನು ಗಾಯಗೊಳಿಸಲು ಅಥವಾ ಸುಡಲು ಬಯಸುವಳೇ? ಖಂಡಿತವಿಲ್ಲ. ಇದೇ ಉದಾಹರಣೆಯಿಂದ ದುಆ ಸ್ವೀಕಾರದ ತತ್ವವನ್ನು ತಿಳಿಯಬಹುದಾಗಿದೆ. ದುಆದಲ್ಲಿ ಹಾನಿಕಾರಕವಾದ ಏನಾದರೂ ಅಂಶವಿದ್ದರೆ ನನ್ನ ದುಆ ಖಂಡಿತವಾಗಿಯೂ ಸ್ವೀಕರಿಸಲ್ಪಟ್ಟಿಲ್ಲ ಎಂಬುದಕ್ಕೆ ನಾನು ಅನುಭವಿಯಾಗಿದ್ದೇನೆ. ನನ್ನ ಎಲ್ಲ ದುಆಗಳು ಸ್ವೀಕರಿಸಲ್ಪಡುವುದಿಲ್ಲ. ನಮ್ಮ ಅರಿವು ಸರಿಯಾಗಿರುವುದಿಲ್ಲ, ಅಲ್ಲಾಹನಾದರೋ ಅದೃಶ್ಯ ಕಾರ್ಯಗಳನ್ನು ತಿಳಿದವನಾಗಿದ್ದಾನೆ. ಹಲವಾರು ಕೆಲಸಗಳನ್ನು ನಾವು ಬಹಳ ಸಂತೋಷದಿಂದ ಅನುಗ್ರಹೀತವೆಂದು ಭಾವಿಸಿಕೊಂಡು

ಮಾಡುತ್ತೇವೆ. ಅದರ ಪರಿಣಾಮ ಬಹಳ ಅನುಗ್ರಹೀತವಾಗಿರುವುದು ಎಂದು ತಿಳಿಯುತ್ತೇವೆ. ಆದರೆ ಅದರ ಅಂತಿಮ ಫಲ ದುಃಖ ಮತ್ತು ವಿಪತ್ತಿನಂದ ಕೂಡಿರುತ್ತದೆ.

ಇಂತಹ ಉದಾಹರಣೆಗಳು ಇಂದು ಸಹ ನಾವು ನೋಡುತ್ತೇವೆ. ನಾವು ದುಆ ಮಾಡಿದ್ದೆವು ಮತ್ತು ಒಂದು ಕೆಲಸವನ್ನು ಮಾಡಲು ಪ್ರಯತ್ನ ಸಹ ಮಾಡಿದ್ದೆವು, ತುಂಬ ದಾನಧರ್ಮಗಳನ್ನು ಮಾಡಿಕೊಂಡು ಕೆಲಸವನ್ನು ಶುರುಮಾಡಿದ್ದೆವು ಆದರೂ ಅದರ ಪರಿಣಾಮ ಉತ್ತಮವಿರಲಿಲ್ಲ ಅಥವಾ ನಮ್ಮ ಪ್ರಾರ್ಥನೆಗಳು ಸ್ವೀಕೃತವಾಗಲಿಲ್ಲವೆಂದು ಅಲ್ಲಾಹನ ಬಗ್ಗೆ ದೂರು ಹೇಳಿಕೊಂಡು ದಿನನಿತ್ಯದ ಅಂಚೆಯಲ್ಲಿ ನನಗೆ ಕೆಲವು ಜನರ ಪತ್ರಗಳು ಬರುತ್ತವೆ. ಮೊದಲ ಸಂಗತಿಯೇನೆಂದರೆ, ದುಆವನ್ನು ಅದರ ಉತ್ತುಂಗಕ್ಕೆ ತಲುಪಿಸಲಾಗಿದೆಯೋ ಇಲ್ಲವೋ; ಅಲ್ಲಾಹನೊಂದಿಗೆ ಇರಿಸಬೇಕಾದ ಸಂಬಂಧವನ್ನು ಇರಿಸಲಾಗಿತ್ತೋ ಇಲ್ಲವೋ ಎಂದು ನೋಡಬೇಕಾಗಿದೆ. ಹಾಗೆ ಮಾಡಿಲ್ಲವೆಂದಾದರೆ, ಅದು ಬರೀ ಬಾಯಿ ಮಾತಿನ ಸಂಗತಿಯಾಗಿತ್ತು ಎಂದು ಹೇಳಬೇಕಾಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಅತಿಯಾಗಿ ದುಆ ಮಾಡಿಕೊಂಡು ಕೂಡ ಅದರ ಪರಿಣಾಮಗಳು ಉಂಟಾಗಿಲ್ಲವೆಂದಾದರೆ, ಅದೇ ಅಲ್ಲಾಹನ ಯೋಜನೆಯಾಗಿರುತ್ತದೆ ಮತ್ತು ಅದರಲ್ಲೇ ಮನುಷ್ಯನ ಒಳಿತಿರುತ್ತದೆ. ತಪ್ಪಾಗಿ ದುಆ ಸ್ವೀಕಾರ ಮಾಡಲು ಒತ್ತಾಯ ಮಾಡಿದ್ದರೆ, ಅದಕ್ಕೆ ಅಲ್ಲಾಹನನ್ನು ದೂರುವ ಬದಲಾಗಿ ಪಶ್ಚಾತ್ತಾಪ ಮಾಡಬೇಕು. ಅಲ್ಲಾಹನು ನಮ್ಮ ದುಆವನ್ನು ಸ್ವೀಕರಿಸಬೇಕು, ಅದರ ಪರಿಣಾಮ ಉತ್ತಮವಲ್ಲದಿದ್ದರೂ ಅದನ್ನು ಸ್ವೀಕರಿಸು ಎಂದು ಹೇಳುವ ಕೆಲವರು ಸಹ ಇರುತ್ತಾರೆ. ಕೆಲವು ವೈವಾಹಿಕ ಸಂಬಂಧದಲ್ಲಿ ಹಾಗೆ ಆಗುತ್ತದೆ. ಅಲ್ಲಾಹನು ಆ ಪ್ರಾರ್ಥನೆಯನ್ನು ಅಂಗೀಕರಿಸಿಕೊಂಡು ಅವನು ಇಷ್ಟಪಡುವ ಜಾಗದಲ್ಲಿ ವಿವಾಹ ಸಂಬಂಧವನ್ನು ಮಾಡಿಕೊಡುತ್ತಾನೆ. ಆದರೆ ಕೆಲವು ಕಾಲದ ನಂತರ ವಿವಾಹ ವಿಚ್ಛೇದನವಾಗುತ್ತದೆ. ಇಂತಹ ಪ್ರಾರ್ಥನೆಗಳನ್ನು ಮಾಡಬಾರದು. ಕೆಲವು ಸಲ ಮನುಷ್ಯನಿಗೆ ಪಾಠ ಕಲಿಸಲು ಅಲ್ಲಾಹನು ಉತ್ತಮ ಅಂತ್ಯಫಲವಿಲ್ಲದ ಪ್ರಾರ್ಥನೆಗಳನ್ನು ಕೂಡ ಅಂಗೀಕರಿಸುತ್ತಾನೆ. ಅನಂತರ ಪರಿಣಾಮ ಮುಂದೆ ಬರುವಾಗ ಅವನು ತೌಬ ಮತ್ತು ಇಸ್ತಿಗ್‌ಫಾರ್ ಮಾಡುತ್ತಾನೆ. ಒಟ್ಟಿನಲ್ಲಿ ಮನುಷ್ಯನ ಎಲ್ಲ ಅಭಿಲಾಷೆಗಳು ಸರಿಯಾಗಿರುವುದಿಲ್ಲ. ಮನುಷ್ಯನ ಮರೆಯುತ್ತಾನೆ ಮತ್ತು ತಪ್ಪು ಮಾಡುತ್ತಿರುತ್ತಾನೆ. ಆದ್ದರಿಂದ ನಮ್ಮ ಅಭಿಲಾಷೆಗಳಲ್ಲಿ ಕೆಲವು ಹಾನಕಾರಕವಾದ ಕಾರಣದಿಂದ ಅಲ್ಲಾಹನು ಅವುಗಳನ್ನು ಸ್ವೀಕರಿಸುವುದಿಲ್ಲ. ಏಕೆಂದರೆ ಹಾನಿಕಾರಕವಾದ ಪರಿಣಾಮವುಂಟು ಮಾಡುವ ಪ್ರಾರ್ಥನೆಗಳನ್ನು ಅಲ್ಲಾಹನು ಸ್ವೀಕರಿಸುವುದು  ಅವನ ಕಾರುಣ್ಯಕ್ಕೆ ವಿರುದ್ಧವಾಗಿರುತ್ತದೆ. ಈ ರೀತಿಯಲ್ಲಿ ಅಲ್ಲಾಹನು ಅವರಿಗೆ ಹಾನಿಯನ್ನು ಉಂಟುಮಾಡಲು ಇಚ್ಛಿಸುವುದಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ತನ್ನ ದಾಸರ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಅವುಗಳನ್ನು ಸ್ವೀಕರಿಸುತ್ತಾನೆ ಎಂಬುದು ಒಂದು ಸತ್ಯ ಮತ್ತು ನಿಶ್ಚಿತವಾದ ಸಂಗತಿಯಾಗಿದೆ. ಆದರೆ ಸಕಲ ದುಆಗಳನ್ನು ಸ್ವೀಕರಿಸುವುದಿಲ್ಲ. ಎಲ್ಲರ ಪ್ರಾರ್ಥನೆಗಳನ್ನು ಅಂಗೀಕರಿಸುವುದಿಲ್ಲ. ಏಕೆಂದರೆ, ಆತ್ಮದ ಆವೇಶದ ಕಾರಣದಿಂದ ಮನುಷ್ಯನು ಪರಿಣಾಮ ಮತ್ತು ಅಂತ್ಯಫಲವನ್ನು ನೋಡದೇ ದುಆ ಮಾಡುತ್ತಾನೆ. ಅದರ ಪರಿಣಾಮವೇನಾಗುವುದು ಎಂದು ಚಿಂತಿಸುವುದೇ ಇಲ್ಲ. ಆದರೆ ನೈಜವಾದ ಒಳಿತನ್ನು ಬಯಸುವ ಮತ್ತು ಅಂತ್ಯಫಲದ ಬಗ್ಗೆ ಗೊತ್ತಿರುವ ಅಲ್ಲಾಹನು ಈ ಹಾನಿಗಳನ್ನು ಮತ್ತು ದುಷ್ಪರಿಣಾಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ದುಆವನ್ನು ರದ್ದು ಕೂಡ ಮಾಡುತ್ತಾನೆ. ಹೀಗೆ ಸ್ವೀಕರಿಸಲ್ಪಡದ ದುಆ ಅವನಿಗೆ ಸಂಬಂಧಿಸಿ ದುಆ ಸ್ವೀಕಾರವಾಗಿರುತ್ತದೆ. ಆದ್ದರಿಂದ ಅಲ್ಲಾಹನ ಸಾಮೀಪ್ಯ ಗಳಿಸಿರುವ ದಾಸರೊಂದಿಗೆ ಅಲ್ಲಾಹನು ಹೀಗೆ ವರ್ತಿಸುತ್ತಾನೆ.  ಮನುಷ್ಯನು ದುಃಖಗಳಿಂದ ಮತ್ತು ದುರ್ಘಟನೆಗಳಿಂದ ಸುರಕ್ಷಿತನಾಗಿರುವಂತಹ ಪ್ರಾರ್ಥನೆಗಳನ್ನು ಅಲ್ಲಾಹನು ಸ್ವೀಕರಿಸುತ್ತಾನೆ. ಆದರೆ ಹಾನಿಕಾರಕ ಪ್ರಾರ್ಥನೆಗಳನ್ನು ಅಲ್ಲಾಹನು ರದ್ದುಮಾಡುವ ಮೂಲಕ ಸ್ವೀಕರಿಸುತ್ತಾನೆ. ನಿನ್ನ ಎಲ್ಲ ದುಆಗಳು ಸ್ವೀಕೃತವಾಗಿರುವುವು ಎಂದು ಅಲ್ಲಾಹನು ಅನೇಕ ಬಾರಿ ನನಗೆ ದಿವ್ಯವಾಣಿ ಮೂಲಕ ತಿಳಿಸಿದ್ದಾನೆ. ಎಂದರೆ ಪ್ರಯೋಜನಕರವಾದ ಎಲ್ಲ ದುಆಗಳು ಅಂಗೀಕರಿಸಲಾಗುವುದು ಎಂದಾಗಿದೆ ಇದರ ಅರ್ಥ. ಸುಮಾರು ಇಪತ್ತೈದು ಮೂವತ್ತು ವರ್ಷಗಳಿಗೆ ಮುಂಚೆ ಈ ಇಲ್‌ಹಾಂ ನನಗೆ ಲಭಿಸಿದಾಗ ಅಲ್ಲಾಹನು ನನ್ನ ಮತ್ತು ನನ್ನ ಪ್ರಿಯ ಜನರ ಪ್ರಾರ್ಥನೆಗಳನ್ನು ಖಂಡಿತ ಸ್ವೀಕರಿಸುವನು ಎಂದು ನನಗೆ ತುಂಬಾ ಸಂತೋಷವಾಯಿತು. ಈ ವಿಷಯದಲ್ಲಿ ಜಿಪುಣತೆ ತೋರಿಸಬಾರದು ಎಂದು ನಾನು ಯೋಚಿಸಿದೆ. ಏಕೆಂದರೆ ಇದು ಅಲ್ಲಾಹನ ಅನುಗ್ರಹವಾಗಿತ್ತು. ಏನೇ ಲಭಿಸಿದ್ದರೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮುತ್ತಖಿಗಳ ಒಂದು ಗುಣವಾಗಿದೆ. ಆದ್ದರಿಂದ ನನ್ನ ಸ್ನೇಹಿತರು ಹೇಳಿದರೂ ಹೇಳದಿದ್ದರೂ ಅವರ ಕಷ್ಟತೆಗಳ ಬಗ್ಗೆ ಅಥವಾ ಏನಾದರೂ ಸಂಗತಿಗಳ ಬಗ್ಗೆ ಹೇಳಿದ್ದರೂ ಹೇಳದಿದ್ದರೂ ಅವರ ಧಾರ್ಮಿಕ ಮತ್ತು ಭೌತಿಕ ಒಳಿತಿಗಾಗಿ ನಾನು ದುಆ ಮಾಡುತ್ತೇನೆ.  (ಮಲ್‌ಫೂಝಾತ್ ಸಂಪುಟ1, ಪುಟ–106–108, ಮುದ್ರಣ 1984)

ಪ್ರಾರ್ಥನೆಯ ಸ್ವೀಕಾರದ ನಿಬಂಧನೆಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಸಂಗತಿಯನ್ನು ಸಹ ಗಮನವಿಟ್ಟು ಕೇಳಬೇಕು. ದುಆ ಸ್ವೀಕಾರಕ್ಕಾಗಿಯೂ ಕೆಲವು ನಿಬಂಧನೆಗಳಿವೆ. ಅವುಗಳಲ್ಲಿ ಕೆಲವು ದುಆ ಮಾಡುವವರ ಕುರಿತು ಮತ್ತು ಕೆಲವು ಬೇರೆಯವರಿಂದ ದುಆ ಮಾಡಿಸುವವರ ಕುರಿತು ಆಗಿರುತ್ತದೆ. ಬೇರೆಯವರಿಂದ ದುಆ ಮಾಡಿಸುವವನು ಸ್ವತಃ ಅಲ್ಲಾಹನ ಭಯ ಮತ್ತು ದೇವಭಕ್ತಿಯನ್ನು ಮುಂದಿರಿಸಬೇಕೆಂಬುದು ಆವಶ್ಯವಾದ ಸಂಗತಿಯಾಗಿದೆ. ಅಲ್ಲಾಹನ ಯಾರನ್ನೂ ಆಶ್ರಯಿಸಿಲ್ಲ, ಅವನಗೆ ಯಾರ ಆವಶ್ಯಕತೆಯೂ ಇಲ್ಲವೆಂಬ ಸಂಗತಿಯನ್ನು ನೆನಪಿನಲ್ಲಿಟ್ಟುಕೊಂಡು ಅವನನ್ನು ಭಯಪಡಬೇಕು. ಅಲ್ಲಾಹನ ಗುಣದೊಂದಿಗೆ ಹೊಂದಾಣಿಕೆ ಇರಿಸುವುದು ಮತ್ತು ದೇವಾರಾಧನೆಯನ್ನು ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ಭಯಭಕ್ತಿ ಮತ್ತು ಸತ್ಯಸಂಧತೆಯಿಂದ ಅಲ್ಲಾಹನನ್ನು ಸಂತೋಷಗೊಳಿಸಬೇಕು. ಇಂತಹ ಸ್ಥಿತಿಯಲ್ಲಿ ದುಆಗಾಗಿ ಸ್ವೀಕಾರದ ಬಾಗಿಲು ತೆರೆಯಲ್ಪಡುತ್ತದೆ. ಅಲ್ಲಾಹನ ಕೋಪಕ್ಕೆ ಕಾರಣವಾಗುವಂತಹ ಕೆಲಸವನ್ನು ಮನುಷ್ಯನು ಮಾಡುವನಾದರೆ, ಅವನೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸುವುದಿಲ್ಲವಾದರೆ, ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವುದಿಲ್ಲವಾದರೆ, ಅವನು ಈ ಕುಕೃತ್ಯಗಳು ದುಆ ಸ್ವೀಕೃತವಾಗದಂತೆ ಮಾಡುವುದು. ನಮ್ಮ ಸ್ನೇಹಿತರು ನಮ್ಮ ದುಆಗಳು ವ್ಯರ್ಥವಾಗದಂತೆ ನೋಡಬೇಕು. ನಿಮ್ಮ ಕೃತ್ಯಗಳು ಸರಿಯಿಲ್ಲವೆಂದಾದರೆ, ನಿಮ್ಮ ಪರವಾಗಿ ನಾನು ಮಾಡುವ ದುಆಗಳು ಸ್ವೀಕರಿಸಲ್ಪಡುವುದಿಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–108, ಮುದ್ರಣ 1984)

ಮನುಷ್ಯನು ವಿಶ್ವಾಸಪರವಾಗಿ ಸುದೃಢನಾಗಿರಬೇಕು ಮತ್ತು ಸತ್ಕರ್ಮಗಳನ್ನು ಮಾಡುವವನಾಗಿರಬೇಕು ಎಂಬುದು ಸಹ ದುಆದ ಸ್ವೀಕಾರಕ್ಕೆ ಆವಶ್ಯವಾದ ಸಂಗತಿಯಾಗಿದೆ. ಅಲ್ಲಾಹನ ಮಾತುಗಳನ್ನು ಅನುಸರಿಸಬೇಕು, ಅವುಗಳ ಪ್ರಕಾರ ನಡೆಯಬೇಕು  ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಏನೂ ಮಾಡದೇ ದುಆ ಮಾಡುವವನು, ಸತ್ಯದಲ್ಲಿ ದುಆ ಮಾಡುತ್ತಿಲ್ಲ, ಬದಲಾಗಿ ಅಲ್ಲಾಹನನ್ನು ಪರೀಕ್ಷಿಸುತ್ತಾನೆ. ಆದ್ದರಿಂದ ದುಆ ಮಾಡುವುದಕ್ಕೆ ಮುಂಚೆ ತನ್ನ ಎಲ್ಲ ಶಕ್ತಿಯನ್ನು ಖರ್ಚುಮಾಡಬೇಕು. ಇದೇ ದುಆದ ಅರ್ಥ. ಆದ್ದರಿಂದ ಮನುಷ್ಯನು ತನ್ನ ಕರ್ಮಗಳನ್ನು ಸರಿಪಡಿಸಬೇಕು, ಸುಧಾರಣೆಗೆ ಬೇಕಾದ ಸಂಗತಿಗಳನ್ನು ಮಾಡಿರಬೇಕು. ದುಆ ಸತ್ಯಹೃದಯದೊಂದಿಗೆ ಮಾಡುವುದಾದರೆ ಅಲ್ಲಾಹನು ಸುಧಾರಣೆಗೆ ಇರುವ ಕಾರ್ಯಗಳನ್ನು ಉಂಟುಮಾಡುತ್ತಾನೆ. ದುಆ ಮಾಡಿರುವಾಗ ಬೇರೆ ಮಾರ್ಗಗಳನ್ನು ಅವಲಂಬಿಸುವ ಆವಶ್ಯಕತೆ ಏನೆಂದು ಕೆಲವರು ಕೇಳುತ್ತಾರೆ. ಈ ಅರಿವಿಲ್ಲದವರು ಯೋಚಿಸಬೇಕು, ದುಆ ಸ್ವತಃ ಒಂದು ರಹಸ್ಯವಾದ ಸಾಧನ ಸಾಮಗ್ರಿಯಾಗಿದೆ. ಅದು ಇತರ ಮಾರ್ಗಗಳನ್ನು ಉಂಟುಮಾಡುತ್ತದೆ. **ಇಯ್ಯಾಕ ನಸ್ತಈನ್** ಎಂಬುದಕ್ಕೆ ಮುಂಚಿತವಾಗಿ **ಇಯ್ಯಾಕ ನಅ್‌ಬುದು** ಎಂಬ ಪ್ರಾರ್ಥನೆಯು ಈ ಸಂಗತಿಯನ್ನು ವಿಶೇಷವಾಗಿ ಸ್ಪಷ್ಟಪಡಿಸುತ್ತದೆ. ನೋಡಿರಿ ಬಾಯಾರಿಕೆಯನ್ನು ಶಮನ ಮಾಡಲು ನೀರನ್ನು ಮತ್ತು ಹಸಿವನ್ನು ನೀಗಿಸಲು ಆಹಾರವನ್ನು ಅಲ್ಲಾಹನು ಒದಗಿಸುತ್ತಾನೆ. ಆದರೆ ನೇರವಾಗಿ ಅಲ್ಲ, ವಿವಿಧ ಮಾರ್ಗಗಳಿಂದ. ಅಚಾನಕ್ಕಾಗಿ ಬಾಯಾರಿಕೆ ಇಲ್ಲದಂತೆ ಆಗುವುದಿಲ್ಲ. ಜಾದುವಿನ ಹಾಗೆ ಆಕಾಶದಿಂದ ನೀರು ಬರುವುದಿಲ್ಲ ಅಥವಾ ಆಹಾರ ಇಳಿಯುವುದಿಲ್ಲ. ಹಲವು ಮಾರ್ಗಗಳನ್ನು ಅಲ್ಲಾಹನು ಉಂಟುಮಾಡುತ್ತಾನೆ. ಆ ಮಾರ್ಗ ಮತ್ತು ಕಾರಣಗಳ ಮೂಲಕ ನಮಗೆ ನೀರು ಮತ್ತು ಆಹಾರ ಸಿಗುತ್ತದೆ. ಒಟ್ಟಿನಲ್ಲಿ ಕಾರಣ ಮತ್ತು ಮಾರ್ಗಗಳ ಪರಂಪರೆ ಹೀಗೆ ನಡೆಯುತ್ತಿರುತ್ತವೆ. ಎಲ್ಲದ್ದಕ್ಕೂ ಒಂದು ಮಾರ್ಗ ಮತ್ತು ಸಾಧನಸಾಮಗ್ರಿಗಳು ಖಂಡಿತ ಇರುತ್ತವೆ. ಏಕೆಂದರೆ ಅಲ್ಲಾಹನ ಗುಣನಾಮಗಳಲ್ಲಿ **ಅಝೀಝ್** ಮತ್ತು **ಹಕೀಂ** ಎಂಬ ಎರಡು ನಾಮಗಳೂ ಇವೆ. **ಅಝೀಝ್** ಎಂದರೆ, ಎಲ್ಲ ಕಾರ್ಯಗಳನ್ನು ಮಾಡುವವನು.  **ಹಕೀಂ** ಎಂದರೆ, ಪ್ರತಿಯೊಂದು ಕೆಲಸವನ್ನು ಏನಾದರೂ ಯುಕ್ತಿಯ ಆಧಾರದಲ್ಲಿ, ಸಂದರ್ಭಾನುಸಾರ ಸರಿಯಾದ ಮತ್ತು ಸಮಂಜಸವಾದ ರೀತಿಯಲ್ಲಿ ಮಾಡುವವನು. ಸಸ್ಯಗಳಲ್ಲಿ ಮತ್ತು ಜಡವಸ್ತುಗಳಲ್ಲಿ ವಿವಿಧ ರೀತಿಯ ವೈಶಿಷ್ಟ್ಯಗಳು ಇರುತ್ತವೆ. ಅಲ್ಲಾಹನು ಸೃಷ್ಟಿಸಿದ ವಸ್ತುಗಳ ಅರಿವು ಜನರಿಗೆ ಅರಿಯುವಂತೆ ಮಾಡುವುದು ಸಹ ಆವಶ್ಯಕವಾದುದಾಗಿದೆ. ಅಲ್ಲಾಹನು ಸೃಷ್ಟಿಸಿದ ವಸ್ತುಗಳ ಅದ್ಭುತಕರವಾದ ಅರಿವು ಹೆಚ್ಚಾದಂತೆ ಅಲ್ಲಾಹನ ಗುಣವೈಶಿಷ್ಟ್ಯಗಳ ಅರಿವು ಸಹ ಮನುಷ್ಯನಗೆ ಲಭಿಸಿ ಅವನು ಅಲ್ಲಾಹನ ಸಾಮೀಪ್ಯ ಗಳಿಸಲು ಅರ್ಹನಾಗುತ್ತಾನೆ.  (ಮಲ್‌ಫೂಝಾತ್, ಸಂಪುಟ–1, ಪುಟ–124–125, ಮುದ್ರಣ 1984)

ಏಕದೇವವಿಶ್ವಾಸ ಹೊಂದಿರುವ ಒಬ್ಬ ವಿಜ್ಞಾನಿ ಆಧ್ಯಾತ್ಮಿಕ ಕಣ್ಣಿನಿಂದ ನೋಡುವನಾದರೆ, ಅಲ್ಲಾಹನು ಸೃಷ್ಟಿಸಿದ ಪ್ರತಿಯೊಂದು ಸೃಷ್ಟಿಯನ್ನು ನೋಡಿಕೊಂಡು ಅವನ ಅಸ್ತಿತ್ವದ ಸಬೂತನ್ನು ಕಾಣುವನು ಮತ್ತು ಅವನ

ವಿಶ್ವಾಸ ವರ್ಧಿಸುವುದು. ಪ್ರತಿಯೊಂದು ಸಂಗತಿಯ ಸೃಷ್ಟಿಗೆ ಉದ್ದೇಶಗಳಿವೆ ಎಂದು ಗೊತ್ತಾಗಲಿಕ್ಕಾಗಿಯೇ ವಸ್ತುಗಳ ವಿಸ್ಮಯಕರವಾದ ಗುಣಗಳನ್ನು ಅಲ್ಲಾಹನು ನಮಗೆ ತೋರಿಸಿ ಕೊಡುತ್ತಾನೆ.

ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತಖ್ವವನ್ನು ಶರೀಅತಿನ ಸಾರಾಂಶ ಮತ್ತು ಧರ್ಮಶಾಸನದ ತಿರುಳು ಎಂದು ಹೇಳಬಹುದು. ಒಬ್ಬನು ಸತ್ಯಾನ್ವೇಷಿಯಾಗಿಕೊಂಡು ಪ್ರಾರಂಭ ಘಟ್ಟಗಳನ್ನು ಮತ್ತು ಅದರ ಮಜಲುಗಳನ್ನು ಸ್ಥೈರ್ಯದಿಂದ ಮತ್ತು ನಿಷ್ಠೆಯಿಂದ ದಾಟಿದರೆ, ಅವನು ಈ ನೇರಮಾರ್ಗ ಮತ್ತು ಸತ್ಯಾನ್ವೇಷಣೆಯ ಕಾರಣದಿಂದ ಉನ್ನತ ಪದವಿಗಳನ್ನು ಗಳಿಸುತ್ತಾನೆ. ದೇವಭಕ್ತರ ದುಆಗಳನ್ನು ಅವನು ಸ್ವೀಕರಿಸುತ್ತಾನೆ ಎಂದು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನು ತನ್ನ ವಾಗ್ದಾನವನ್ನು ಲಂಘಿಸುವುದಿಲ್ಲ. ದೇವಭಕ್ತಿ ಎಂಬುದು ದುಆಗೆ ಬೇಕಾದ ಅನಿವಾರ್ಯವಾದ ನಿಬಂಧನೆಯಾಗಿದೆ. ಮನುಷ್ಯನು ಅಜಾಗರೂಕನಾಗಿ ಮತ್ತು ದುರ್ಮಾರ್ಗದಲ್ಲಿ ಇದ್ದುಕೊಂಡು ದುಆ ಮಾಡುವನಾದರೆ ಅವನು ಮೂರ್ಖನು ಮತ್ತು ತಿಳಿಗೇಡಿ ಅಲ್ಲವೇ? ಆದ್ದರಿಂದ ದುಆ ಸ್ವೀಕಾರದ ರುಚಿ ಮತ್ತು ಸಂತೋಷವನ್ನು ಪಡೆಯುವಂತಾಗಲು ಹಾಗೂ ವಿಶ್ವಾಸ ವರ್ಧನೆಯುಂಟಾಗಲು ನಮ್ಮ ಜಮಾಅತಿನವರು ಸಾಧ್ಯವಾದಷ್ಟು ದೇವಭಕ್ತಿಯ ಮಾರ್ಗದಲ್ಲಿ ನಡೆಯಬೇಕು. ಅಲ್ಲಾಹನಲ್ಲಿ ವಿಶ್ವಾಸ ಇರಿಸಿದ್ದರೆ, ಕ್ರಮೇಣ ಅದು ವರ್ಧಿಸುವುದು ಎಂದು ಅಲ್ಲಾಹನು ಹೇಳುತ್ತಾನೆ.

(ಮಲ್‌ಫೂಝುತ್, ಸಂಪುಟ–1, ಪುಟ–108–109, ಮುದ್ರಣ 1984)

ಕೃಪೆಯ ವಿಧಗಳ ಬಗ್ಗೆ ವಿವರಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೃಪೆಯ ಎರಡು ವಿಧಗಳಿವೆ. ಒಂದು **ರಹ್ಮಾನಿಯ್ಯತ್** ಮತ್ತೊಂದು **ರಹೀಮಿಯ್ಯತ್. ರಹ್ಮಾನಿಯ್ಯತ್** ಎಂಬುದು ನಮ್ಮ ಅಸ್ತಿತ್ವ ಮತ್ತು ಹುಟ್ಟಿಗೆ ಮುಂಚಿತವಾಗಿ ಆಕಾಶ ಮತ್ತು ಭೂಮಿಯು ಹಾಗೂ ಭೂಮ್ಯಾಕಾಶಗಳಲ್ಲಿರುವ ವಸ್ತುಗಳ ರೂಪದಲ್ಲಿ ಶುರುವಾದ ವರದಾನಗಳಾಗಿವೆ. ಇವೆಲ್ಲದರಿಂದ ಮನುಷ್ಯನೇ ಸಾಮಾನ್ಯವಾಗಿ ಪ್ರಯೋಜನ ಪಡೆಯುತ್ತಾನೆ. ಆಡು ಇತ್ಯಾದಿ ಮೃಗಗಳಿಂದ ಸಹ ಮನುಷ್ಯನೇ ಪ್ರಯೋಜನ ಪಡೆಯುತ್ತಾನೆ. ಮನುಷ್ಯನು ಎಂತಹ ಉತ್ತಮ ಮತ್ತು ಸ್ವಾದಿಷ್ಟ ಆಹಾರಗಳನ್ನು ತಿನ್ನುತ್ತಾನೆ. ಉತ್ತಮ ಗುಣಮಟ್ಟದ ಮಾಂಸಗಳು ಮನುಷ್ಯನಿಗೆ ಆಗಿರುತ್ತದೆ. ತುಂಡುಗಳು ಮತ್ತು ಎಲುಬುಗಳು ನಾಯಿಗಳಿಗೆ ಕೊಡಲಾಗುತ್ತದೆ. ಮೃಗಗಳು ಸಹ ಅಭಿರುಚಿಗಳನ್ನು ಅನುಭವಿಸುತ್ತದೆ. ಆದರೆ ಉನ್ನತ ಮಟ್ಟದ ಎಲ್ಲ ಅನುಭೂತಿಗಳನ್ನು ಮನುಷ್ಯನು ಮಾತ್ರವೇ ಅನುಭವಿಸುತ್ತಾನೆ. ಆಧ್ಯಾತ್ಮಿಕ ಅನುಭೂತಿಯನ್ನು ಮೃಗಗಳು ಅನುಭವಿಸುವುದೇ ಇಲ್ಲ. ಅದು ಮನುಷ್ಯನಗೆ ಮಾತ್ರ ಮೀಸಲಾಗಿರುತ್ತದೆ. ಎರಡನೆಯದು **ರಹೀಮಿಯ್ಯತ್** ಆಗಿದೆ. ಎಂದರೆ ನಾವು ದುಆ ಮಾಡುವಾಗ ಅಲ್ಲಾಹನು ನಮಗೆ ದಯಪಾಲಿಸುತ್ತಾನೆ. ಇವೆಲ್ಲವೂ ನಮ್ಮ ಹುಟ್ಟಿಗೆ ಮುಂಚೆ ನಮ್ಮ ಪ್ರಾರ್ಥನೆಯಿಲ್ಲದೇ ಅಲ್ಲಾಹನು ತನ್ನ **ರಹ್ಮಾನಿಯ್ಯತ್** ಎಂಬ ಗುಣವೈಶಿಷ್ಯದ ಕಾರಣದಿಂದ ಉಂಟುಮಾಡಿದ್ದಾನೆ. ಎರಡನೇ ರೀತಿಯ ಕೃಪೆ ರಹೀಮಿಯ್ಯತ್ ಆಗಿದೆ. ಇದರ ಸಂಬಂಧ ಯಾವಾಗಲೂ ಪ್ರಾರ್ಥನೆಯೊಂದಿಗೆ ಆಗಿರುತ್ತದೆ ಎಂದು ಯೋಚಿಸಿದರೆ ತಿಳಿಯುವುದು. ಕೆಲವರು ಇಂದು ದುಆವನ್ನು ನವೀನಾಚಾರವೆಂದು ಭಾವಿಸುತ್ತಾರೆ. ಅಲ್ಲಾಹನೊಂದಿಗೆ ದುಆದ ವಿಷಯದಲ್ಲಿ ಮನುಷ್ಯನಿಗೆ ಇರುವ ಸಂಬಂಧವನ್ನು ಸಹ ನಾನು ಹೇಳಲು ಬಯಸುತ್ತೇನೆ. ಒಬ್ಬ ಮಗು ಹಸಿವಿನಿಂದ ಹಾಲಿಗಾಗಿ ಕಿರುಚಾಡುವಾಗ ತಾಯಿಯ ಸ್ತನದಿಂದ ಹಾಲು ತ್ವರಿತವಾಗಿ ಬರುತ್ತದೆ. ಮಗುವಿಗೆ ದುಆದ ಹೆಸರೇ ಗೊತ್ತಿಲ್ಲ. ಆದರೆ ಅವನ ಕಿರುಚಾಟ ಹಾಲನ್ನು ಎಳೆದು ಹೊರಗೆ ತರುತ್ತದೆ. ಇದರ ಅನುಭವ ಎಲ್ಲರಿಗೂ ಇದೆ. ಕೆಲವು ವೇಳೆ ಹಾಲು ಇರುವುದಾಗಿ ತೋರುವುದಿಲ್ಲ. ಆದರೆ ಮಗುವಿನ ಕಿರುಚಾಟ ಹಾಲನ್ನು ಎಳೆದು ತರುತ್ತದೆ. ಹೀಗಿರುವಾಗ ಅಲ್ಲಾಹನ ಮುಂದೆ ನಮ್ಮ ಕಿರುಚಾಟ ಏನನ್ನು ಕೂಡ ಸೆಳೆಯುವದಿಲ್ಲವೇ? ಎಳೆಯುತ್ತದೆ ಮತ್ತು ಎಲ್ಲವೂ ಬರುತ್ತವೆ. ಆದರೆ ಪಂಡಿತರು ಮತ್ತು ತತ್ವಜ್ಞಾನಿಗಳು ಕುರುಡರಾಗಿಕೊಂಡು ಏನನ್ನು ಕಾಣುವುದಿಲ್ಲ. ಮಗುವಿಗೆ ತಾಯಿಯೊಂದಿಗೆ ಇರುವ ಸಂಬಂಧವನ್ನು ಮನಸ್ಸಿನಲ್ಲಿ ಇರಿಸಿಕೊಂಡು ದುಆದ ತತ್ವದ ಬಗ್ಗೆ ಚಿಂತಿಸುವುದಾದರೆ, ಇದು ಸುಲಭವಾಗಿ ಅರ್ಥವಾಗುತ್ತದೆ.

(ಮಲ್‌ಫೂಝಾತ್, ಸಂಪುಟ–1, ಪುಟ–128–130, ಮುದ್ರಣ 1984)

ಬೇಡಿದ ನಂತರ ಉಂಟಾಗುತ್ತವೆ ಎಂಬ ಪಾಠವನ್ನು ಎರಡನೇ ರೀತಿಯ ಕರುಣೆಯು ಕಲಿಸುತ್ತದೆ. ಬೇಡುತ್ತಾ ಹೋದರೆ ಲಭಿಸುತ್ತಲೇ ಇರುವುದು. ಬೇಡುವುದು ಮನುಷ್ಯನ ವಿಶೇಷತೆಯಾಗಿದೆ ಮತ್ತು ದುಆವನ್ನು ಅಂಗೀಕರಿಸುವುದು ಅಲ್ಲಾಹನ ವಿಶೇಷತೆಯಾಗಿದೆ ಎಂಬ ಸಂಗತಿಯ ಪ್ರಾಮುಖ್ಯತೆಯನ್ನು ವಿವರಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬೇಡುವುದು ಮನುಷ್ಯನ ವಿಶೇಷತೆಯಾಗಿದೆ ಮತ್ತು ದುಆವನ್ನು ಅಂಗೀಕರಿಸುವುದು ಅಲ್ಲಾಹನ ವಿಶೇಷತೆಯಾಗಿದೆ. ಯಾರು ತಿಳಿಯುವುದಿಲ್ಲವೋ ಮತ್ತು ಅಂಗೀಕರಿಸುವುದಿಲ್ಲವೋ ಅವನು ಸುಳ್ಳುಗಾರನಾಗಿದ್ದಾನೆ. ರಹ್ಮಾನಿಯ್ಯತ್ ಮತ್ತು ರಹೀಮಿಯ್ಯತ್ ಬೇರೆ ಬೇರೆಯಲ್ಲ. ಒಂದನ್ನು ಬಿಟ್ಟು ಮತ್ತೊಂದನ್ನು ಪಡೆಯಲು ಬಯಸುವವನಗೆ ಏನೂ ಸಿಗಲಿಕ್ಕಿಲ್ಲ. ರಹೀಮಿಯ್ಯತ್‌ನಿಂದ ಪ್ರಯೋಜನ ಪಡೆಯಲು ಇರುವ ಶಕ್ತಿಯು ರಹ್ಮಾನಿಯ್ಯತ್‌ನಿಂದ ಲಭಿಸುವುದು. ಅವನು ನಮಗೆ ಮಾರ್ಗಗಳನ್ನು ತೋರಿಸಿದ್ದಾನೆ, ವಸ್ತುಗಳನ್ನು ಸಹ ನೀಡಿದ್ದಾನೆ, ದುಆ ಮಾಡಿಕೊಂಡು ರಹೀಮಿಯ್ಯತ್‌ನಿಂದ ಪ್ರಯೋಜನ ಪಡೆಯಲು ಇರುವ ಶಕ್ತಿ ರಹ್ಮಾನಿಯ್ಯತ್‌ನಿಂದ ಲಭಿಸುತ್ತದೆ. ಯಾರು ಹೀಗೆ ಮಾಡುವುದಿಲ್ಲವೋ ಅವನು ಅಲ್ಲಾಹನ ಅನುಗ್ರಹಗಳನ್ನು ನಿಷೇಧಿಸುತ್ತಾನೆ. **ಇಯ್ಯಾಕ ನಅ್‌ಬುದು** ಎಂಬುದರ ಅರ್ಥವೇನೆಂದರೆ, ಬಾಹ್ಯವಾದ ಸಾಮಾನುಗಳು ಮತ್ತು ಮಾರ್ಗಗಳ ಮೂಲಕ ನಾವು ಅಲ್ಲಾಹನ ಆರಾಧನೆಯನ್ನು ಮಾಡುತ್ತೇವೆ ಎಂದಾಗಿದೆ. ನೋಡಿರಿ, ನಾಲಗೆ, ಇದು ಇಲ್ಲದಿದ್ದರೆ ನಾವು ಮಾತನಾಡುವಂತಿಲ್ಲ. ನಾಲಗೆ ಒಣಗಿ ಹೋದರೆ ಮನುಷ್ಯನಿಗೆ ಮಾತನಾಡಲು ಆಗುವುದಿಲ್ಲ. ಇಂತಹ ನಾಲಗೆಯನ್ನು ದುಆಗಾಗಿ ನೀಡಲಾಗಿದೆ. ಅದು ಹೃದಯದ ಭಾವನೆಯನ್ನು ಸಹ ಪ್ರಕಟಿಸುತ್ತದೆ. ನಾವು ದುಆ ಮಾಡಬೇಕಾದದ್ದನ್ನು ನಾಲಗೆಯಿಂದ ಮಾಡದಿದ್ದರೆ, ಅದು ನಮ್ಮ ದೌರ್ಭಾಗ್ಯವೇ ಸರಿ. ಕೆಲವು ರೋಗಗಳಿಂದ ನಾಲಗೆ ಕೆಲಸ ಮಾಡುವುದನ್ನೇ ಬಿಟ್ಟುಬಿಡುತ್ತದೆ. ಕೆಲವೊಮ್ಮೆ ಮನುಷ್ಯನು ಈ ರೋಗದ ಕಾರಣದಿಂದ ಮೂಕನಾಗುತ್ತಾನೆ. ಅಲ್ಲಾಹನು ನಮಗೆ ನಾಲಗೆ ನೀಡಿರುವುದು ಅವನ ರಹ್ಮಾನಿಯ್ಯತ್ ಆಗಿದೆ. ಅದೇ ರೀತಿಯಲ್ಲಿ ಕಿವಿಯ ರಚನೆ. ಅದರ ರಚನೆಯಲ್ಲಿ ಏನಾದರೂ ವ್ಯತ್ಯಾಸವಾದರೆ ಏನೂ ಆಲಿಸಲು ಸಾಧ್ಯವಲ್ಲ. ಅದೇ ರೀತಿಯಲ್ಲಿ ಹೃದಯದ ಸ್ಥಿತಿಯಾಗಿದೆ. ರೋಗ ಬಂದರೆ, ಎಲ್ಲವು ಒಂದು ಮಟ್ಟಿಗೆ ಉಪಯೋಗ ಶೂನ್ಯವಾಗುತ್ತದೆ. ಹುಚ್ಚರನ್ನು ನೋಡಿರಿ. ಅವರ ಅಂಗಾಂಗಗಳು ಎಷ್ಟು ಉಪಯೋಗವಿಲ್ಲದಂತೆ ಆಗಿವೆ. ಹೀಗಿರುವಾಗ ಅಲ್ಲಾಹನು ನೀಡಿರುವ ಈ ಅನುಗ್ರಹಗಳಿಗೆ ಬೆಲೆ ಕೊಡಬೇಡವೇ? ಅಲ್ಲಾಹನು ತನ್ನ ದಯೆಯಿಂದ ನಮಗೆ ನೀಡಿರುವ ಈ ಶಕ್ತಿಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ, ನಾವು ಅನುಗ್ರಹಗಳನ್ನು ನಿಷೇಧಿಸುವವರಾಗುವೆವು. ಆದ್ದರಿಂದ ತಮ್ಮ ಶಕ್ತಿಗಳನ್ನು ಮತ್ತು ಸಾಮರ್ಥ್ಯಗಳನ್ನು ಉಪಯೋಗಿಸದೇ ದುಆ ಮಾಡುವವರಾದರೆ, ಅಂತಹ ದುಆದಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ಅಲ್ಲಾಹನು ಮೊದಲೇ ಕೊಟ್ಟಿರುವ ವರದಾನಗಳಿಂದ ನಾವು ಪ್ರಯೋಜನ ಪಡೆಯುವುದಿಲ್ಲವಾದರೆ, ನಂತರ ಸಿಗುವ ವರದಾನಗಳಿಂದ ಅವನು ಹೇಗೆ ಪ್ರಯೋಜನ ಪಡೆಯುವುದು. ಅಲ್ಲಾಹನು ನೀಡಿರುವ ಅನುಗ್ರಹಗಳಿಗೆ ಬೆಲೆ ಕೊಡಬೇಕು ಮತ್ತು ಅದರ ಉನ್ನತ ಉದ್ದೇಶಗಳನ್ನು ಈಡೇರಿಸಬೇಕೆಂದು ಸ್ಪಷ್ಟವಾಗಿ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದನ್ನು ಸರಿಯಾಗಿ ಉಪಯೋಗಿಸಲು ಸಾಧ್ಯವಾಗಲು ಪ್ರಾರ್ಥನೆ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಒಬ್ಬ ದಾಸನು ಯಥಾರ್ಥ ದಾಸ್ಯದ ಹಕ್ಕನ್ನು ಈಡೇರಿಸುತ್ತಾನೆ. ಆಗಲೇ ಅವನು ನೀಡಿರುವ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಲು ಸಾಧ್ಯವಾಗುವುದು. ಅಲ್ಲಾಹನ ಅನುಗ್ರಹಗಳನ್ನು ಸೆಳೆಯುವಂತಾಗುವುದು. ರಹ್ಮಾನಿಯ್ಯತ್‌ನಿಂದ ನಮಗೆ ಲಭಿಸಿದ ವಸ್ತುಗಳಿಂದ ರಹೀಮಿಯ್ಯತ್‌ನಂದಲೂ ಪ್ರಯೋಜನ ಪಡೆಯಲು ಸಾಧ್ಯವಾಗುವುದು. ಕೃತಜ್ಞತೆ ಅರ್ಪಿಸುವುದರಿಂದ ಅಲ್ಲಾಹನು ಅನುಗ್ರಹಗಳು ಲಭಿಸುತ್ತದೆ. ಇದನ್ನು ಇನ್ನೂ ವಿವರಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಟ್ಟಿನಲ್ಲಿ, ಹೇ ಸರ್ವಲೋಕ ಪರಿಪಾಲಕನಾದ ಪ್ರಭೂ, ನೀನು ನಮಗೆ ಮೊದಲು ನೀಡಿದ ವರದಾನಗಳನ್ನು ನಾವು ವ್ಯರ್ಥಮಾಡಲಿಲ್ಲ ಮತ್ತು ನಾಶಮಾಡಲಿಲ್ಲ ಎಂದು **ಇಯ್ಯಾಕ ನಅ್‌ಬುದು** ಎಂಬ ದುಆ ಮೂಲಕ ನಾವು ಹೇಳುತ್ತೇವೆ. ಮನುಷ್ಯನು ಸರಿಯಾದ ದೃಷ್ಟಿಯನ್ನು ಬೇಡಲು **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ದುಆದ ಮೂಲಕ ನಮಗೆ ಅಲ್ಲಾಹನು ನಿರ್ದೇಶನ ನೀಡಿದ್ದಾನೆ. ಏಕೆಂದರೆ ಅವನ ಅನುಗ್ರಹ ಮತ್ತು ಕೃಪೆ ಇಲ್ಲದಿದ್ದರೆ ಅಂಧಕಾರದಲ್ಲಿ ಸಿಲುಕಿರುವ ದುರ್ಬಲನಾದ ಮನುಷ್ಯನಿಗೆ ದುಆ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ **ರಹ್ಮಾನಿಯ್ಯತ್** ಮೂಲಕ ಮನುಷ್ಯನಿಗೆ ಲಭಿಸಿರುವ ಅನುಗ್ರಹಳಿಂದ ಪ್ರಯೋಜನ ಪಡೆಯದೇ ದುಆ ಮಾಡಿದರೆ ಯಾವುದೇ ಪರಿಣಾಮ ಉಂಟಾಗಲಾರದು. ಈ ಅಂಧಕಾರದಿಂದ ರಕ್ಷಣೆ ಪಡೆಯಲು ಮನುಷ್ಯನು ಅಲ್ಲಾಹನ ಸಹಾಯವನ್ನು ಕೇಳಬೇಕು.

ಬ್ರಿಟಿಷ್ ಸರ್ಕಾರದ ಕಾನೂನಿನಲ್ಲಿ, ಕೃಷಿ ಸಾಲವನ್ನು ಪಡೆಯಲು ಏನಾದರೂ ಕೆಲವು ಸಾಮಾನುಗಳನ್ನು ತೋರಿಸಬೇಕಾಗುತ್ತದೆ. ಪ್ರಕೃತಿ ನಿಯಮವನ್ನು ನೋಡಿರಿ. ನಮಗೆ ಮೊದಲು ಲಭಿಸಿದ ವಸ್ತುಗಳನ್ನು ನಾವು ಹೇಗೆ ಉಪಯೋಗಿಸಿದ್ದೇವೆ? ಬುದ್ಧಿ, ಕಣ್ಣು, ಕಿವಿ ಇದ್ದುಕೊಂಡು ದುರ್ಮಾರ್ಗಕ್ಕೆ ಹೋಗಿಲ್ಲವೆಂದಾದರೆ, ಮೂರ್ಖ ಮತ್ತು ಹುಚ್ಚನಾಗಿಲ್ಲವಾದರೆ ದುಆ ಮಾಡಿರಿ, ಇನ್ನೂ ಹೆಚ್ಚಿನ ದೈವಿಕ ಅನುಗ್ರಹಗಳು ಲಭಿಸುವುವು. ಇಲ್ಲದಿದ್ದರೆ, ದೌರ್ಭಾಗ್ಯವೇ ಸರಿ. (ಮಲ್‌ಫೂಝಾತ್, ಸಂಪುಟ–1, ಪುಟ–128–131, ಮುದ್ರಣ 1984)

ಅಲ್ಲಾಹನು ನೀಡಿದ ವರದಾನಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲವೆಂದಾದರೆ ಪ್ರಾರ್ಥನೆಯಿಂದ ಯಾವುದೇ ಪ್ರಯೋಜನವಿಲ್ಲ. ನಾವು ಇದರ ಬಗ್ಗೆ ಬಹಳವಾಗಿ ಯೋಚಿಸಬೇಕು. ಪ್ರಕೃತಿ ನಿಯಮದಲ್ಲಿ

ದುಆ ಸ್ವೀಕಾರದ ಉದಾಹರಣೆಗಳು ಇವೆ. ಪ್ರತಿಯೊಂದು ಕಾಲಘಟ್ಟದಲ್ಲಿ ಅಲ್ಲಾಹನು ಜೀವಂತ ಉದಾಹರಣೆಗಳನ್ನು ಕಳುಹಿಸುತ್ತಾನೆ. ಆದ್ದರಿಂದಲೇ ಅವನು **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ದುಆವನ್ನು ಕಲಿಸಿದ್ದಾನೆ. ಇದು ಅಲ್ಲಾಹನ ಇಚ್ಛೆ ಮತ್ತು ಕಾನೂನಾಗಿದೆ. ಯಾರಿಂದಲೂ ಇದನ್ನು ಬದಲಾಯಿಸಲು ಸಾಧ್ಯವಲ್ಲ. ನಮ್ಮ ಕರ್ಮಗಳನ್ನು ಸಂಪೂರ್ಣಗೊಳಿಸಲು **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ಪ್ರಾರ್ಥನೆ ಮೂಲಕ ಬೇಡಲಾಗುತ್ತದೆ. **ಸಿರಾತಲ್ ಮುಸ್ತಖೀಮ್**‌ನ ಘಟ್ಟವನ್ನು ತಲುಪಲು ನಮ್ಮ ಸಾಮರ್ಥ್ಯಗಳಿಂದ ಪ್ರಯೋಜನ ಪಡೆದು ದೈವಿಕ ಸಹಾಯವನ್ನು ಬೇಡಬೇಕು. **ಸಿರಾತಲ್ ಮುಸ್ತಖೀಂ** ಪಡೆಯಲು, ನೇರವಾದ ಮಾರ್ಗದಲ್ಲಿ ನಡೆಯಲು ಅಲ್ಲಾಹನು ನಮಗೆ ನೀಡಿದ ಶಕ್ತಿಗಳಿಂದ ಪ್ರಯೋಜನ ಪಡೆಯುತ್ತಾ ಸಹಾಯವನ್ನು ಪಡೆಯಬೇಕೆಂದು **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್** ಎಂಬ ದುಆ ನಮ್ಮನ್ನು ಕಲಿಸುತ್ತದೆ. ಬಾಹ್ಯವಾದ ವಸ್ತುಗಳಿಂದ ಪ್ರಯೋಜನ ಪಡೆಯಬೇಕಾದುದು ಆವಶ್ಯಕ. ಯಾರು ಅದನ್ನು ಬಿಟ್ಟುಬಿಡುತ್ತಾನೋ ಅವನು ಅನುಗ್ರಹಗಳನ್ನು ನಿಷೇಧಿಸುತ್ತಾನೆ. ಒಳಿತುಗಳನ್ನು ಮಾಡಲಿಕ್ಕೂ ಅಲ್ಲಾಹನಿಂದ ಸಹಾಯವನ್ನು ಬೇಡಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪ್ರಾರ್ಥನೆ ಮಾಡಲು ಅಲ್ಲಾಹನು ನಮಗೆ ನಾಲಗೆಯನ್ನು ನೀಡಿದ್ದಾನೆ, ಭಾವನೆಗಳನ್ನು ಮತ್ತು ಉದ್ದೇಶಗಳನ್ನು ಪ್ರಕಟಿಸಲು ಅಲ್ಲಾಹನು ಹೃದಯವನ್ನು ನೀಡಿದ್ದಾನೆ. ನೆನಪಿಡಿರಿ, ನಾವು ಈ ಸಾಮರ್ಥ್ಯಗಳನ್ನು ಮತ್ತು ಶಕ್ತಿಗಳನ್ನು ಉಪಯೋಗಶೂನ್ಯವನ್ನಾಗಿ ಮಾಡಿಕೊಂಡು ದುಆ ಮಾಡಿದರೆ, ದುಆದಿಂದ ಯಾವುದೇ ಪ್ರಯೋಜನವಿಲ್ಲ. ಮೊದಲು ಲಭಿಸಿದ ವರದಾನಗಳಿಂದ ಪ್ರಯೋಜನ ಪಡೆಯದೇ ಮತ್ತೆ ಲಭಿಸುವ ವರದಾನಗಳಿಂದ ಹೇಗೆ ಪ್ರಯೋಜನ ಪಡೆಯಲು ಸಾಧ್ಯ. ನಾವು ನೀನು ನೀಡಿದ ವರದಾನಗಳು ಮತ್ತು ಶಕ್ತಿಗಳನ್ನು ವ್ಯರ್ಥ ಮತ್ತು ನಾಶ ಮಾಡಲಿಲ್ಲವೆಂದಾಗಿದೆ **ಇಹ್ದಿನಸ್ಸಿರಾತಲ್ ಮುಸ್ತಖೀಮ್**‌ಗಿಂತ ಮುಂಚೆ **ಇಯ್ಯಾಕ ನಅ್‌ಬುದು** ಹೇಳುವುದರ ಅರ್ಥ. **ರಹೀಮಿಯ್ಯತ್**‌ನಿಂದ ಪ್ರಯೋಜನ ಪಡೆಯಲು ಸಾಧ್ಯವಾಗುವಂತೆ ಮಾಡುವುದಾಗಿದೆ **ರಹ್ಮಾನಿಯ್ಯತ್**‌ನ ವೈಶಿಷ್ಟ್ಯ. ನೀವು ದುಆ ಮಾಡಿದರೆ ನಾನು ಸ್ವೀಕರಿಸುವನು ಎಂದು ಅಲ್ಲಾಹನು ಹೇಳಿದ್ದು ಕೇವಲ ಬಾಯಿಮಾತಲ್ಲ. ಬೇಡುವುದು ಮನುಷ್ಯನ ವೈಶಿಷ್ಟ್ಯವಾಗಿದೆ. ನೀಡುವುದು ಮತ್ತು ಪ್ರಾರ್ಥನೆಗಳನ್ನು ಸ್ವೀಕರಿಸುವುದು ಅಲ್ಲಾಹನ ವೈಶಿಷ್ಟ್ಯವಾಗಿದೆ. ಯಾರು ಅಲ್ಲಾಹನಲ್ಲಿ ಬೇಡುವುದಿಲ್ಲವೋ ಅವನು ಅಕ್ರಮಿಯಾಗಿದ್ದಾನೆ. ಪ್ರಾರ್ಥನೆ ಎಂಬುದು ಎಷ್ಟು ಸುಖದಾಯಕ ಅವಸ್ಥೆಯೆಂದರೆ, ಈ ಅನುಭೂತಿ ಮತ್ತು ಸುಖವನ್ನು ಯಾವ ವಾಕ್ಯಗಳಿಂದ ಮನವರಿಕೆ ಮಾಡಿಸಲು ಸಾಧ್ಯವೆಂದು ಯೋಚಿಸಿ ದುಃಖವಾಗುತ್ತದೆ. ಅದನ್ನು ಅನುಭವಿಸುವುದರಿಂದಲೇ ಗೊತ್ತಾಗುವುದು.

ಮನುಷ್ಯನು ವಿಶ್ವಾಸಪರವಾಗಿ ಸುದೃಢನಾಗಿರಬೇಕು ಮತ್ತು ಸತ್ಕರ್ಮಗಳನ್ನು ಮಾಡುವವನಾಗಿರಬೇಕು ಎಂಬುದು ದುಆದ ಸ್ವೀಕಾರಕ್ಕೆ ಆವಶ್ಯವಾದ ಸಂಗತಿಯಾಗಿದೆ. ತನ್ನ ವಿಶ್ವಾಸವನ್ನು ಸರಿಪಡಿಸದೇ ಸತ್ಕರ್ಮಗಳನ್ನು ಮಾಡದೇ ದುಆ ಮಾಡುವವನು, ಸತ್ಯದಲ್ಲಿ ದುಆ ಮಾಡುತ್ತಿಲ್ಲ, ಬದಲಾಗಿ ಅಲ್ಲಾಹನನ್ನು ಪರೀಕ್ಷಿಸುತ್ತಾನೆ. ಸಂಗತಿಯೇನೆಂದರೆ, ನಮ್ಮ ಸತ್ಕರ್ಮಗಳನ್ನು ಪರಿಪೂರ್ಣಗೊಳಿಸು ಎಂದು ದುಆ ಮಾಡಲು **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ವಾಕ್ಯದಲ್ಲಿ ಕಲಿಸಲಾಗಿದೆ. ಅನುಗ್ರಹಕ್ಕೆ ಪಾತ್ರರಾದವರ ಮತ್ತು ಕ್ರೋಧಕ್ಕೆ ಪಾತ್ರರಾಗದವರ ಮಾರ್ಗದಲ್ಲಿ ನಡೆಸು ಎಂದು ಹೇಳಿಕೊಂಡು ಇದನ್ನು ಸ್ಪಷ್ಟಪಡಿಸಲಾಯಿತು. ನಿನ್ನ ಸಹಾಯವಿಲ್ಲದೇ ನಾವು ದಾರಿತಪ್ಪುವೆವು ಆದ್ದರಿಂದ ಹಾಗೆ ಆಗುವುದರಿಂದ ರಕ್ಷಿಸು ಎಂದು ಪ್ರಾರ್ಥಿಸಲು ಕಲಿಸಲಾಗಿದೆ.

ದುಆಗೆ ಸಂಬಂಧಿಸಿ ನಮಾಝ್‌ನ ಉದ್ದೇಶ ಮತ್ತು ಪ್ರಾಮುಖ್ಯ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮಾಝ್‌ನ ಯಥಾರ್ಥ ಉದ್ದೇಶ ಮತ್ತು ಅದರ ತಿರುಳು ಪ್ರಾರ್ಥನೆಯೇ ಆಗಿದೆ. ದುಆ ಮಾಡುವುದು ಪ್ರಕೃತಿ ನಿಯಮಕ್ಕೆ ಅನುಸಾರವಾದ ಸಂಗತಿಯಾಗಿದೆ. ಉದಾಹರಣೆಗೆ ನಾವು ಸಾಮಾನ್ಯವಾಗಿ ನೋಡುತ್ತೇವೆ. ಮಗು ಅಳುತ್ತಾ ಕಿರುಚುತ್ತಾ ತನ್ನ ಅಸಮಾಧಾನವನ್ನು ಪ್ರಕಟಿಸುವಾಗ ಮಗುವಿನ ತಾಯಿ ಚಂಚಲಚಿತ್ತಳಾಗಿ ಮಗುವಿಗೆ ಹಾಲನ್ನು ಕೊಡುತ್ತಾಳೆ. ದೇವ ಮತ್ತು ದಾಸನ ನಡುವೆ ಇದೇ ರೀತಿಯ ಒಂದು ಸಂಬಂಧವಿರುತ್ತದೆ. ಅದನ್ನು ಪ್ರತಿಯೊಬ್ಬನು ಮನವರಿಕೆ ಮಾಡುವುದಿಲ್ಲ. ಮನುಷ್ಯನು ಅಲ್ಲಾಹನ ಬಾಗಿಲ ಮುಂದೆ ಬೀಳುವಾಗ, ಬಹಳ ವಿನಯದಿಂದ, ನಮ್ರತೆಯಿಂದ ಅಲ್ಲಾಹನ ಮುಂದೆ ತನ್ನ ಅವಸ್ಥೆಯನ್ನು ಮುಂದಿರಿಸುವಾಗ, ಅವನಿಂದ ತನ್ನ ಆವಶ್ಯಕತೆಗಳನ್ನು ಕೇಳುವಾಗ ದೈವಿಕ ಕೃಪೆ ಆವೇಶದಿಂದ ಬರುತ್ತದೆ ಮತ್ತು ಅಂತಹ ವ್ಯಕ್ತಿಗಳ ಮೇಲೆ ಕರುಣೆ ತೋರಿಸಲಾಗುತ್ತದೆ. ಅಲ್ಲಾಹನ ಅನುಗ್ರಹ ಮತ್ತು ಕೃಪೆಯ ಹಾಲು ಸಿಗಬೇಕಾದರೆ ಕೂಡ ಒಂದು ಅಳುವಿನ ಆವಶ್ಯಕತೆಯಿದೆ. ಆದ್ದರಿಂದ ಅಲ್ಲಾಹನ ಮುಂದೆ ಅಳುವ ಕಣ್ಣುಗಳನ್ನು ಇರಿಸಬೇಕು. (ಮಲ್‌ಫೂಝಾತ್, ಸಂಪುಟ–1, ಪುಟ–352, ಮುದ್ರಣ 1984)

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಮುಂದೆ ಅಳುವುದರಿಂದ ಏನೂ ಸಿಗುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಇದು ಸಂಪೂರ್ಣವಾಗಿಯೂ ತಪ್ಪಾದ ಮತ್ತು ಸುಳ್ಳು ಮಾತಾಗಿದೆ. ಇಂತಹ ಜನರು ಅಲ್ಲಾಹನ ಅಸ್ತಿತ್ವ, ಅವನ ಗುಣವೈಶಿಷ್ಟ್ಯ, ಶಕ್ತಿ ಮತ್ತು ಅವನ ಸಹಾಯದ ಕುರಿತು ವಿಶ್ವಾಸ ಹೊಂದಿಲ್ಲ. ಇವರಲ್ಲಿ ಯಥಾರ್ಥ ವಿಶ್ವಾಸವಿರುವುದಾದರೆ, ಹೀಗೆ ಹೇಳಲು ಅವರು ಧೈರ್ಯ ಪಡುತ್ತಿರಲಿಲ್ಲ. ಯಾವಾಗಲೆಲ್ಲ ಒಬ್ಬ ವ್ಯಕ್ತಿ ಅಲ್ಲಾಹನ ಮುಂದೆ ಬರುತ್ತಾನೋ, ಯಥಾರ್ಥ ಪಶ್ಚಾತ್ತಾಪದೊಂದಿಗೆ ಅಲ್ಲಾಹನ ಕಡೆಗೆ ಮರಳುತ್ತಾನೋ ಅಲ್ಲಾಹನು ಅಂತಹ ವ್ಯಕ್ತಿಯ ಮೇಲೆ ಯಾವಾಗಲೂ ತನ್ನ ಅನುಗ್ರಹಗಳನ್ನು ವರ್ಷಿಸುತ್ತಾನೆ.

ನಾವು ಪರಿಶುದ್ಧ ಹೃದಯದೊಂದಿಗೆ ಅಲ್ಲಾಹನ ಮುಂದೆ ಬರಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಅದಕ್ಕೆ ಸರಿಹೊಂದುವಂತೆ ನಮ್ಮನ್ನು ಸ್ವತಃ ಮಾಡಬೇಕು ಮತ್ತು ಅಲ್ಲಾಹನ ಮುಂದೆ ಹೋಗಲು ಯೋಗ್ಯನಂತೆ ಮಾಡುವ ನೈಜವಾದ ಬದಲಾವಣೆಯನ್ನು ಮಾಡಬೇಕು ಎಂದಾಗಿದೆ ಇದಕ್ಕಿರುವ ನಿಬಂಧನೆ. ನಾನು ಸತ್ಯವಾಗಿಯೂ ಹೇಳುತ್ತೇನೆ. ಅಲ್ಲಾಹನಲ್ಲಿ ಅದ್ಭುತಕರವಾದ ಸಾಮರ್ಥ್ಯಗಳು ಇವೆ. ಅವನಲ್ಲಿ ಅಪರಿಮಿತವಾದ ಅನುಗ್ರಹಗಳು ಮತ್ತು ವರದಾನಗಳು ಇವೆ. ಆದರೆ ಅದನ್ನು ನೋಡಲು ಮತ್ತು ಪಡೆಯಲು ಪ್ರೇಮದ ಕಣ್ಣುಗಳನ್ನು ಉಂಟುಮಾಡಬೇಕು. ಅಲ್ಲಾಹನೊಂದಿಗೆ ಯಥಾರ್ಥ ಪ್ರೇಮವಿದ್ದರೆ ಅಲ್ಲಾಹನು ಬಹಳವಾಗಿ ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾನೆ ಮತ್ತು ನೆರವನ್ನು ನೀಡುತ್ತಾನೆ. (ಮಲ್‌ಫೂಝಾತ್, ಸಂಪುಟ–1, ಪುಟ–352–353, ಮುದ್ರಣ 1984)

ಸತ್ಯವಿಶ್ವಾಸಿಗಳ ಬಗ್ಗೆ ಹೇಳುತ್ತಾ ಅಲ್ಲಾಹನು ಹೇಳುತ್ತಾನೆ: **ಯಧ್‌ಕರೂನಲ್ಲಾಹ ಖಿಯಾಮನ್ ವಖುಊದನ್ ವ ಅಲಾ ಜುನೂಬಿಹಿಂ ವಯತಫಕ್ಕರೂನ ಫೀ ಖ಼ಲ್‌ಕಿಸ್ಸಮಾವಾತಿ ವಲ್‌ಅರ್‌ಝ್. ರಬ್ಬನಾ ಮಾ ಖ಼ಲಕ್ತ ಹಾಧ಼ ಬಾತಿಲ**. ಎಂದರೆ ಸತ್ಯವಿಶ್ವಾಸಿಗಳು ನಿಂತುಕೊಂಡು, ಕುಳಿತುಕೊಂಡು ಮತ್ತು ತಮ್ಮ ಪಾರ್ಶ್ವಗಳಲ್ಲಿ ಒರಗಿಕೊಂಡು ಅಲ್ಲಾಹನನ್ನು ಸ್ಮರಿಸುತ್ತಾರೆ. ಭೂಮ್ಯಾಕಾಶಗಳಲ್ಲಿ ಇರುವ ಅದ್ಭುತಕರವಾದ ಸೃಷ್ಟಿಗಳ ಬಗ್ಗೆ ಆಲೋಚಿಸುತ್ತಾರೆ. ಅಲ್ಲಾಹನು ಯಾವುದನ್ನೂ ವ್ಯರ್ಥವಾಗಿ ಸೃಷ್ಟಿಸಿಲ್ಲವೆಂದು ಅಲ್ಲಾಹನ ಸೃಷ್ಟಿಗಳ ಸೂಕ್ಷ್ಮತೆಗಳ ಅರಿವು ಅವರಿಗೆ ಆಗುವಾಗ ಅವರು ಹೇಳುತ್ತಾರೆ. ಎಂದರೆ ಇವರು ಅಲ್ಲಾಹನ ಸೃಷ್ಟಿಯ ಬಗ್ಗೆ ತಿಳಿಯುವಾಗ ಭೌತಿಕರಂತೆ ವರ್ತಿಸುವುದಿಲ್ಲ. ಭೂಮಿಯ ರೂಪ ಇದಾಗಿದೆ, ಅದರ ಗಾತ್ರ ಇಷ್ಟಿದೆ, ಅದರ ಗುರುತ್ವಾಕರ್ಷಣೆಯ ಶಕ್ತಿ ಹೀಗಿದೆ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳೊಂದಿಗೆ ಅದಕ್ಕೆ ಇಂತಹ ಸಂಬಂಧವಿದೆ ಎಂದು ಮಾತ್ರ ಭೌತಿಕರಂತೆ ಅವರು ಹೇಳುವುದಿಲ್ಲ. ಬದಲಾಗಿ ಸೃಷ್ಟಿಯ ಪರಿಪೂರ್ಣತೆ ಮತ್ತು ಸಮಗ್ರತೆಯನ್ನು ಗುರುತಿಸಿದ ನಂತರ ಅದರ ವೈಶಿಷ್ಟ್ಯಗಳ ಬಗ್ಗೆ ಗೊತ್ತಾದ ನಂತರ ಅದರ ಸೃಷ್ಟಿಕರ್ತನ ಕಡೆಗೆ ಮರಳುತ್ತಾರೆ ಮತ್ತು ತಮ್ಮ ವಿಶ್ವಾಸವನ್ನು ಸುದೃಢಗೊಳಿಸುತ್ತಾರೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಈನ್, ಸಂಪುಟ–2, ಪುಟ–191–192)

ಎಂದರೆ ಅರಿವು ಲಭಿಸಿದ ನಂತರ ಅಲ್ಲಾಹನ ಕಡೆಗೆ ಬಾಗುತ್ತಾರೆ. ಇದೇ ಒಬ್ಬ ಸತ್ಯವಿಶ್ವಾಸಿಯ ವಿಶೇಷ ಲಕ್ಷಣ ಮತ್ತು ವೈಶಿಷ್ಟ್ಯವಾಗಿದೆ.

ಈ ಕೆಲವು ವಿಷಯಗಳನ್ನು ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ನೀಡಿರುವ ಮಹತ್ತಾದ ಖಜಾನೆಯಿಂದ ಮುಂದಿರಿಸಿದ್ದೇನೆ. ಅವುಗಳಿಂದ ಪ್ರಾರ್ಥನೆಯ ಪ್ರಾಮುಖ್ಯ, ಅದರ ಯುಕ್ತಿ, ದುಆ ಮಾಡುವ ರೀತಿ, ಅದರ ತತ್ವ ಎಲ್ಲದರ ಮೇಲೆ ಅಲ್ಪಸ್ವಲ್ಪ ಬೆಳಗು ಬೀರುತ್ತದೆ. ನಾವು ಅವುಗಳನ್ನು ಅರಿತರೆ ನಾವು ನಮ್ಮ ಜೀವಿತದಲ್ಲಿ ಒಂದು ಪರಿವರ್ತನೆಯನ್ನು ಮಾಡುವವರಾಗುವೆವು. ಅಲ್ಲಾಹನೊಂದಿಗೆ ಇರುವ ಸಂಬಂಧದಲ್ಲಿ ಒಂದು ವಿಶಿಷ್ಟವಾದ ಅವಸ್ಥೆಯುಂಟಾಗುವುದು. ಅಲ್ಲಾಹನ ಅನುಗ್ರಹಗಳನ್ನು ಸೆಳೆಯುವವರಾಗುವೆವು.

ನಾವು ಅಲ್ಲಾಹನ ಸಾಮೀಪ್ಯವನ್ನು ಪಡೆಯುವಂತಾಗಲು, ಅವನ ಆಜ್ಞೆಗಳನ್ನು ನಡೆಯುವಂತಾಗಲು, ನಮ್ಮ ವಿಶ್ವಾಸವನ್ನು ಸುದೃಢಗೊಳಿಸುತ್ತಾ ಹೋಗಲು, ದುಆದ ಯುಕ್ತಿ ಮತ್ತು ತತ್ವಗಳನ್ನು ತಿಳಿಯುವಂತಾಗಲು, ನಮ್ಮ ಕರ್ಮಗಳನ್ನು ಸುಧಾರಿಸಲು, ಅಲ್ಲಾಹನು ಯಾರ ದುಆಗಳನ್ನು ಸ್ವೀಕರಿಸುತ್ತಾನೋ ಅವರಲ್ಲಿ ಸೇರುವಂತಾಗಲು ನಾವು ಈ ರಮಝ಼ಾನ್ ತಿಂಗಳಲ್ಲಿ ಪ್ರಯತ್ನಿಸಬೇಕು. ನಮ್ಮ ಸಹೋದರರಿಗಾಗಿಯೂ ದುಆ ಮಾಡುತ್ತಿರಿ. ಮೊದಲು ಸಹ ಮನವಿ ಮಾಡುತ್ತಿದ್ದೆ. ಪಾಕಿಸ್ತಾನ ಮತ್ತು ಅಲ್‌ಜೀರಿಯ ಸಮೇತ ಎಲ್ಲೆಲ್ಲ ಅಹ್ಮದಿಯರಿಗೆ ಕಷ್ಟತೆಗಳನ್ನು ಕೊಡಲಾಗುತ್ತದೋ ಅವರಿಗಾಗಿ ವಿಶೇಷವಾಗಿ ದುಆಗಳನ್ನು ಮಾಡಬೇಕು. ಪಾಕಿಸ್ತಾನದಲ್ಲಂತು ದಿನಾಲು ಏನಾದರೂ ಘಟನೆ ನಡೆಯುತ್ತಿರುತ್ತದೆ. ಅಲ್ಲಿ ಅಹ್ಮದಿಯರಿಗೆ ಯಾವುದಾದರೂ ರೀತಿಯಲ್ಲಿ ಕಷ್ಟತೆಗಳನ್ನು ಕೊಡಲಾಗುತ್ತಿವೆ. ಆದ್ದರಿಂದ ಅವರಿಗಾಗಿ ವಿಶೇಷವಾಗಿ ದುಆ ಮಾಡಬೇಕು. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಪುನಃ ಮೊಕದ್ದಮೆಗಳನ್ನು ಮಾಡಲು ಅವರು ಉದ್ದೇಶಿಸಿದ್ದಾರೆ ಎಂದು ತೋರುತ್ತದೆ. ಅಲ್ಲಾಹನು ಅವರನ್ನು ಸಹ

ಸಂರಕ್ಷಿಸಲಿ. ಇತರರಿಗೆ ದುಆ ಮಾಡುವುದರಿಂದಲೂ ದುಆಗಳನ್ನು ಸ್ವೀಕೃತವಾಗುತ್ತವೆ. ಈ ವಿಧಾನವನ್ನು ಯಾವಾಗಲೂ ನೆನಪಿನಲ್ಲಿಡಬೇಕು.

ಇತರರಿಗೆ ದುಆಗಳನ್ನು ಮಾಡುವವರಿಗಾಗಿ ದೇವದೂತರು ದುಆಗಳನ್ನು ಮಾಡುತ್ತಾರೆ. ದೇವದೂತರ ಪ್ರಾರ್ಥನೆಗಳು ಇರುವುದಾದರೆ, ಅದು ಎಷ್ಟು ಲಾಭಕರವಾದ ವ್ಯಾಪಾರವೆಂದು ಊಹಿಸಬಹುದು. ಆದ್ದರಿಂದ ನಮಗೆ ಮಾತ್ರವಲ್ಲ, ನಾವು ಇತರರಿಗಾಗಿಯೂ ವಿಶೇಷವಾಗಿ ಬಹಳವಾಗಿ ದುಆ ಮಾಡಬೇಕು. ಅಲ್ಲಾಹನು ನಮಗೆ ವಿಶೇಷವಾಗಿ ಈ ರಮಝಾನಿನಲ್ಲಿ ಈ ಮಾರ್ಗದ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ.

************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೊಡುತ್ತಿರಲಿಲ್ಲ. ವಿಶೇಷವಾಗಿ ಈಜಿಪ್ಟ್ ನಲ್ಲಿ ಹುಡುಕಲು ಆದೇಶಿಸಿದ್ದರು.

ಈ ವಚನದಲ್ಲಿ ಆಧ್ಯಾತ್ಮಿಕ ಮತ್ತು ಐಹಿಕ ಪ್ರಗತಿಯ ಗುಟ್ಟು ರಟ್ಟು ಮಾಡಲಾಗಿದೆ. ಎಲ್ಲ ವಿಫಲತೆಯ ಬೇರು ಧೃತಿಗೆಡುವುದಾಗಿದೆ. ಯಾವ ವ್ಯಕ್ತಿ ದೃಡನಿಶ್ಚಯ ಮತ್ತು ಧೃಢ ಜ್ಞಾನವಿಲ್ಲದೆ ಕಾರ್ಯ ಕೈಬಿಡುವನು. ಅವನು ಸದಾ ತನ್ನ ವೃತ್ತಿಯಲ್ಲಿ ಅಥವಾ ತನ್ನ ಉದ್ದೇಶ ಸಾಧನೆಯಲ್ಲಿ ವಿಫಲನಾಗುವನು. ಸಾಮಾನ್ಯದಿಂದ ಸಾಮಾನ್ಯ ವೃತ್ತಿಯಲ್ಲೂ ಈ ತತ್ವ ಕಾರ್ಯ ಮಾಡುತ್ತಿದೆ. ಒಬ್ಬ ದೊಡ್ಡ ಕಾರ್ಮಿಕ ಮತ್ತು ಒಬ್ಬ ಸಾಧಾರಣ ಕಾರ್ಮಿಕರಲ್ಲಿಯೂ ಈ ವ್ಯತ್ಯಾಸ ಕಾಣಬಹುದು, ಒಬ್ಬನು ಪ್ರತಿಯೊಂದು ಕಠಿಣ ಕೆಲಸದ ಸಮಯದಲ್ಲಿ ಹೇಳುವನು. ಇದು ಆಗದು. ಇನ್ನೊಬ್ಬ ಅದನ್ನು ಮುಂದುವರೆಸುವನು ಮತ್ತು ಅಂತಿಮವಾಗಿ ಜಯಗಳಿಸುವನು. ವೃತ್ತಿಗಳಲ್ಲಿಯೇ ಅಲ್ಲ ದೈವಿಕ ಕಾರ್ಯಗಳಲ್ಲೂ ಈ ತತ್ವ ಕಾರ್ಯಸಾಧುವಾಗಿದೆ. ಯಾವ ರೋಗಿ ತನ್ನ ಆರೋಗ್ಯದ ಆಸೆ ಬಿಡುವನು ಅವನು ಆರೋಗ್ಯ ಪಡೆಯುವುದು ದುಸ್ತರವಾಗುತ್ತದೆ. ಯಾವ ವಿದ್ಯಾರ್ಥಿಯು ತನ್ನ ಯಶಸ್ಸಿನ ಧ್ಯಾನ ಬಿಡುವನೋ ಅವನು ದಡ್ಡನಾಗುತ್ತಾನೆ. ಆಧ್ಯಾತ್ಮಿಕ ಸ್ಥಿತಿಗಳಲ್ಲೂ ಅದೇ ತತ್ವ ಕೆಲಸ ಮಾಡುತ್ತದೆ. ಯಾವ ಸಮುದಾಯ ಪಾಪಗಳನ್ನು ಕ್ಷಮಿಸಲ್ಪಡುವುದಿಲ್ಲ ಎಂದು ನಂಬುವರೋ, ಅವರು ಪಾಪಗಳನ್ನು ದೂರ ಮಾಡಲು ಪ್ರಯತ್ನ ಮಾಡಲಾರರು. ಯಾರು ಸಹಜ ರೀತಿಯಲ್ಲಿ ಪರಿಶುದ್ಧತೆಯನ್ನು ಒಪ್ಪುವುದಿಲ್ಲ. ಅವರು ತಮ್ಮ ಆಧ್ಯಾತ್ಮಿಕ ಶಕ್ತಿಗಳನ್ನು ಬಲಪಡಿಸಲು ಆಸಕ್ತಿವಹಿಸುವುದಿಲ್ಲ.

ರಸೂಲುಲಾಹ್(ಸ) ರವರು ಸಹ ಖಿನ್ನತೆಯನ್ನು ದೂರ ಮಾಡಲು ವಿಶೇಷ ಗಮನ ವಹಿಸಿದ್ದಾರೆ. ಉದಾಹರಣೆಗೆ ಹೇಳಿದರು. **"ಲಿಕುಲ್ಲಿ ದಾಯಿನ್ ದವಾವುನ್ ಇಲ್ಲಲ್ ಮೌತ್"** ಮರಣವನ್ನು ಹೊರತುಪಡಿಸಿ ಎಲ್ಲ ರೋಗಳಿಗೂ ಶಮನ (ಔಷಧಿ) ಇದ್ದೇ ಇದೆ. ಅಥವಾ ಹೇಳಿದರು. ಮನ್ ಖಾಲ ಹಲಕಲ್ ಖೌಮು ಫಹುವ ಅಹಲರಹುಮ್, ಯಾರು ಸಮುದಾಯವು ನಶ್ವರಗೊಂಡಿದೆ ಎಂದು ಹೇಳುವನು ಅವನು ಸಮುದಾಯದ ಹಂತಕನಾಗುವನು. ಏಕೆಂದರೆ ಅವನು ಸಮುದಾಯದ ಧೈರ್ಯವನ್ನು ಮುರಿದು ಅದನ್ನು ನಾಶಗೊಳಿಸಲು ಕಾರಣನಾಗುತ್ತಾನೆ. ಆದುದರಿಂದ ವೈಯಕ್ತಿಕವಾಗಿರಲಿ, ಸಾಮುದಾಯಿಕವಾಗಿರಲಿ ಭರವಸೆಯನ್ನು ಬಿಡಬಾರದು. ಆದರೆ ನೆನಪಿರಲಿ, ಸತ್ಕರ್ಮಗಳೊಂದಿಗೆಯ ಭರವಸೆ ಪ್ರಗತಿ ಹೊಂದುತ್ತದೆಯೇ ಹೊರತು ಆಲಸ್ಯ ಅಥವಾ ಅನವಶ್ಯಕ ಮನೋಕಾಮನೆಗಳಿಂದಲ್ಲ. ಉದಾಹರಣೆಗೆ ಮುಸಲ್ಮಾನರು ಪ್ರಯತ್ನಪಟ್ಟು ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ಬದಲು ಮಸೀಹನು ಬಂದು ಇಡೀ ಲೋಕದ ಅನುಗ್ರಹಗಳು ತಂದುಕೊಡುವನು ಎಂದು ನಂಬಿದ್ದಾರೆ. ಅಂದರೆ ಕೇವಲ ಮನೋಕಾಮನೆಗಳು ಮನದಲ್ಲಿ ಸೇರಿಕೊಂಡರೆ ಅದು ಸಹ ಒಂದು ರೀತಿಯ ಖಿನ್ನತೆಯಾಗಿದೆ. ಅದು ನಾಶಹೊಂದಿರುತ್ತದೆ.

**(ತಫ್ಸೀರ್ ಕಬೀರ್, ಸಂಪುಟ-3, ಪುಟ-352, ಮುದ್ರಣ ಖಾದಿಯಾನ್ 2010)**

### ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ವಜ್ರವೈಡೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. ***(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)***

*(ಪುಟ ಸಂಖ್ಯೆ 02ರ ಉಳಿದ ಭಾಗ)*

**ಇಂತಹ ದೃಷ್ಟಾಂತ ಪ್ರಕಟವಾಗಿಲ್ಲ, ನೀವು ಸತ್ಯವಂತರಾಗಿದ್ದರೆ ಹಿಂದಿನ ಕಾಲಘಟ್ಟಗಳಿಂದ ಒಂದು ಉದಾಹರಣೆಯನ್ನಾದರೂ ತೋರಿಸಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು. ಎಂದೂ ಯಾವ ಪ್ರವಾದಿ ಅಥವಾ ಸಂದೇಶವಾಹಕನ ಅಥವಾ ಮುಹದ್ದಿಸ್‌ನ ಕಾಲಘಟ್ಟದಲ್ಲಿ ರಂಝಾನಿನಲ್ಲಿ ಚಂದ್ರ ಸೂರ್ಯ ಗ್ರಹಣಗಳು ಒಟ್ಟು ಸೇರಿಲ್ಲ ಮತ್ತು ಲೋಕಸೃಷ್ಟಿಯಾದಾಗಿನಿಂದ ಯಾವ ಪ್ರವಾದಿತ್ವವಾದಿ ಅಥವಾ ಸಂದೇಶವಾಹಕನಾಗುವ ವಾದ ಮಾಡಿದವರ ಅಥವಾ ಮುಹದ್ದಿಸರ ಕಾಲಘಟ್ಟದಲ್ಲಿ ಎಂದೂ ಚಂದ್ರ ಸೂರ್ಯ ಗ್ರಹಣಗಳು ಒಟ್ಟುಗೂಡಲಿಲ್ಲ. ಒಟ್ಟುಗೂಡಿದೆ ಎಂದು ಯಾರಾದರೂ ಹೇಳುವವರಾದರೆ ಸಾಬೀತುಪಡಿಸುವುದು ಅವರ ಹೊಣೆಯಾಗಿದೆ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-9, ಪುಟ-48)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೀವು ಸತ್ಯವಂತರಾದರೆ ಹಿಂದಿನ ಕಾಲಘಟ್ಟಗಳಿಂದ ಒಂದು ಉದಾಹರಣೆಯನ್ನಾದರೂ ತೋರಿಸಿ, ನಮಗೆ ಯಾವುದೋ ಒಂದು ಇಂತಹ ಗ್ರಂಥವಾದರೂ ತೋರಿಸಿ, ಅದರಲ್ಲಿ ನಾನು ಅಲ್ಲಾಹನಿಂದ ನಿಯುಕ್ತಿಗೊಂಡನಾಗಿದ್ದೇನೆ ಎಂಬ ದಾವೆ ಹೂಡಿರಬೇಕು ಮತ್ತು ನಾನೇ ವಾಗ್ದತ್ತ ಮಸೀಹ ಹಾಗೂ ಮಹದಿಯಾಗಿದ್ದೇನೆ ಮತ್ತು ಅತಿಕರ್ಮಿಗಳ ಅಗ್ನಿಜ್ವಾಲೆಯನ್ನು ಶಮನಗೊಳಿಸಲು ಬಂದಿರುವೆನು, ನಾನು ಧರ್ಮವನ್ನು ಪುನಶ್ಚೇತನಗೊಳಿಸಲು ಮತ್ತು ದೈವವಿಶ್ವಾಸದ ರೀತಿ ಬೋಧಿಸಲು ಅಲ್ಲಾಹನಿಂದ ಕಳುಹಿಸಲ್ಪಟ್ಟಿದ್ದೇನೆ ಎಂದು ಆಗಿರಬೇಕು ಅಂದ ಹಾಗೆ ಅವನ ವಾದಕ್ಕೆ ಈ ದೃಷ್ಟಾಂತ ತಾಳೆಯಾಗಿರಬೇಕು, ಅಲ್ಲಾಹನು ಅವನ ಕಾಲದಲ್ಲಿ ಚಂದ್ರ ಸೂರ್ಯ ಗ್ರಹಣಗಳನ್ನು ಉಂಟುಮಾಡಬೇಕು, ಅವನು ಸತ್ಯವಂತನೇ ಆಗಲಿ ಅಥವಾ ಸುಳ್ಳುಗಾರನೇ ಆಗಲಿ, ನೀವು ಅದರ ಉದಾಹರಣೆ ಪ್ರಸ್ತುತಪಡಿಸದಿದ್ದರೆ ಮತ್ತು ಖಂಡಿತವಾಗಿಯೂ ನೀವು ಪ್ರಸ್ತುತಪಡಿಸಲಾರಿರಿ, ಕೋಪೋದ್ರೇಕಗೊಳ್ಳುವ ಹೊರತು ನಿಮ್ಮಲ್ಲೇನು ಇಲ್ಲ. ಆದುದರಿಂದ ತಿಳಿದುಕೊಳ್ಳಿರಿ. ಅಲ್ಲಾಹನು ನನಗಾಗಿ ಈ ದೃಷ್ಟಾಂತ ರಚಿಸಿರುವನು. (ನೂರುಲ್ ಹಖ್, ರೂಹಾನಿ ಖಝಾಈನ್, ಸಂಪುಟ-8, ಪುಟ-211)

**ಯಾವ ವ್ಯಕ್ತಿ ಈ ಚಂದ್ರ ಸೂರ್ಯ ಗ್ರಹಣ ದೃಷ್ಟಾಂತ ಈ ಮೊದಲು ಸಹ ಉಂಟಾಗಿದೆ ಎಂಬ ಭ್ರಮೆಯಲ್ಲಿದ್ದಾನೆ ಅವನು ಸುಳ್ಳುಗಳನ್ನು ಅನುಸರಿಸಿದ್ದಾನೆ ಮತ್ತು ರಸೂಲುಲ್ಲಾಹ್(ಸ) ಅವರ ಮಾತಿನ ಮೇಲೆ ಸುಳ್ಳುಗಾರರ ಮಾತುಗಳಿಗೆ ಆದ್ಯತೆ ನೀಡಿದ್ದಾನೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಓ ಬುದ್ಧಿಹೀನರೇ ಮತ್ತು ಮೂಢರೇ ಇದು ಖಾತಮಲ್ ಅಂಬಿಯಾ(ಸ) ರವರ ಹದೀಸ್ ಆಗಿದೆ. ಅವರು ಎಲ್ಲ ಪ್ರವಾದಿಗಳಲ್ಲಿ ಶ್ರೇಷ್ಠರಾಗಿದ್ದಾರೆ. ಆ ಹದೀಸ್ ದಾರ್ ಖುತನಿಯಲ್ಲಿ ಬರೆಯಲಾಗಿದೆ, ಅದನ್ನು ಬರೆದು ಸಾವಿರ ವರ್ಷಗಳೇ ಕಳೆದಿವೆ. ಅಂದ ಹಾಗೆ ಅವರೊಂದಿಗೆ ಕೇಳಿ ನೋಡಿ, ನಿಮಗೆ ಏನಾದರೂ ಸಂಶಯವಿದ್ದರೆ ನಮಗಾಗಿ ಅಂತಹ ಯಾವುದಾದರೂ ಪುಸ್ತಕ ಅಥವಾ ಪತ್ರಿಕೆ ಹೊರಡಿಸಿರಿ. ಅದರಲ್ಲಿ ನಿಮ್ಮ ವಾದ ಪುರಾವೆ ಸಹಿತ ಸ್ಪಷ್ಟವಿರಲಿ, ಆ ಮೂಲಕ ಮನವರಿಕೆ ಮಾಡಿಕೊಡಿ. ಈ ರೀತಿಯ ಚಂದ್ರ ಸೂರ್ಯ ಗ್ರಹಣ ನೋಡಿ ಆಗಿದೆ ಎಂದು, ನೀವು ಸತ್ಯವಂತರಾಗಿದ್ದರೆ, ಖಂಡಿತವಾಗಿಯೂ ನೀವು ಅಂತಹದೊಂದು ಉದಾಹರಣೆ ತೋರಿಸಲಾರಿರಿ. ಅಂದ ಹಾಗೆ ನೀವು ಸುಳ್ಳುಗಳನ್ನು ಅನುಸರಿಸಬೇಡಿ, ಪೂರ್ವ ಮಹಾತ್ಮರುಗಳು ಶತಮಾನ ಶತಮಾನಗಳ ಹಿಂದಿನಿಂದ ನ್ಯಾಯ ತೀರ್ಪಿನ ಸಲುವಾಗಿ ಆ ದೃಷ್ಟಾಂತಕ್ಕಾಗಿ ಕಾಯುತ್ತಿದ್ದರು ಎಂಬ ವಿಷಯ ನೀವು ತಿಳಿದಿಲ್ಲವೆ, ಅಂದ ಹಾಗೆ ನೀವು ಆ ಜ್ಞಾನಪಡೆಯುವವರಾಗಿದ್ದರೆ ಖಂಡಿತವಾಗಿಯೂ ಅದನ್ನು ವಿವರಿಸುತಿದ್ದೀರಿ ಮತ್ತು ಎಂದು ಮರೆಯುತ್ತಿರಲಿಲ್ಲ. ಏಕೆಂದರೆ ಆ ಗತ ಇತಿಹಾಸವನ್ನು ಗೌರವಿಸುತಿದ್ದೀರಿ. ಅದರ ಪ್ರತೀಕ್ಷೆ ಮಾಡುತ್ತಿದ್ದೀರಿ. ತಿಂಗಳು ದಿನ ದಿನಗಳು ಸಹ ಪ್ರೇಮಿಗಳ ಹಾಗೆ ಕಾಯುತ್ತಿದ್ದೀರಿ ಅದನ್ನು ನೋಡುವ ಕಾತರದಲ್ಲಿರುತ್ತಿದ್ದೀರಿ, ಆದರೆ ಅವರು ತನ್ನ ಕಾಲಘಟ್ಟಗಳಲ್ಲಿ ಈ ದೃಷ್ಟಾಂತವನ್ನು ಕಾಣಲಿಲ್ಲ, ಕಾಣುವವರಾಗಿದ್ದರೆ ಅವಶ್ಯವಾಗಿ ಅದನ್ನು ವಿವರಿಸುತ್ತಿದ್ದರು. ಅವರು ನಿರಂತರವಾಗಿ ಗ್ರಂಥಗಳನ್ನು ಬರೆದುಕೊಂಡೇ ಬಂದಿದ್ದಾರೆ, ನೀವು ತಿಳಿದಿದ್ದೀರಿ ಅದರಲ್ಲಿ ಈ ದೃಷ್ಟಾಂತದ ಸುಳಿವೇ ಇಲ್ಲ. ಅವರ ಆಲಸ್ಯದಿಂದಾಗಿ ಈ ವಿಷಯ ಪ್ರಸ್ತಾಪಿಸಲಿಲ್ಲವೆಂಬುದು ನಿಮ್ಮ ಭ್ರಮೆ ಆಗಿದೆ. ಹೀಗೆನಾದರೂ ನೀವು ಸಂಶಯಪಟ್ಟರೆ ನೀವು ಅಪವಾದವನ್ನು ಮಾಡಿದಂತೆ, ಅವರು ಹೇಗೆ ತಾನೇ ಇಂತಹ ಮಹತ್ತರವಾದ ಘಟನೆ ವಿವರಿಸದಿರಲು ಸಾಧ್ಯ. ಅವರುಗಳು ಘಟನೆಗಳನ್ನು ಸಂಗ್ರಹಿಸುವುದರಲ್ಲಿ ನಿಪುಣರಾಗಿದ್ದರು. ಚಂದ್ರ ಸೂರ್ಯ ಗ್ರಹಣ

ಮೇಲೆಯೂ ಅವಶ್ಯವಾಗಿ ಬರೆಯುತ್ತಿದ್ದರು. ಅಂದ ಹಾಗೆ ಯಾವ ವ್ಯಕ್ತಿ ಈ ಚಂದ್ರ, ಸೂರ್ಯ ಗ್ರಹಣ ಮೊದಲು ಸಹ ಉಂಟಾಗಿದೆ ಎಂಬ ಭ್ರಮೆಯಲ್ಲಿದ್ದಾನೆಯೋ ಅವನು ಮಿಥ್ಯವನ್ನು ಅನುಸರಿಸಿದಂತೆ ಮತ್ತು ರಸೂಲುಲಾಹ್(ಸ) ರವರ ಮಾತಿಗಿಂತ ಸುಳ್ಳುಗಾರರ ಮಾತುಗಳಿಗೆ ಆದ್ಯತೆ ನೀಡಿದಂತೆ. ಎಚ್ಚರವಿರಲಿ ನಾನು ಸಾಕ್ಷಿಗಳ ಸಮಕ್ಷಮ ಹೇಳುತ್ತೇನೆ ಯಾವ ವ್ಯಕ್ತಿ ಈ ದೃಷ್ಟಾಂತವನ್ನು ನಿರಾಕರಿಸುವನೋ. ಅವನ ಬಳಿ ಯಾವ ಪುರಾವೆಯೂ ಇಲ್ಲ, ಅವನು ಅತಿಕರ್ಮಿ ರೀತಿಯಲ್ಲಿ ಮಾತನಾಡುತ್ತಾನೆ. ನಮ್ಮ ಬಳಿ ಎಲ್ಲ ಕಾಲಘಟ್ಟಗಳ ಸಾಕ್ಷ್ಯವಿದೆ. ಗ್ರಂಥಗಳಿವೆ, ಆಕ್ಷೇಪಗಳೆಲ್ಲ ನಿರಾಧಾರವಾಗಿವೆ. (ನೂರುಲ್ ಹಖ್, ಭಾಗ-2, ರೂಹಾನಿ ಖಝಾಈನ್, ಸಂಪುಟ-8, ಪುಟ-253)

**ಮೌಲ್ವಿಗಳು ಅದರ ಒಂದಾದರೂ ಉದಾಹರಣೆ ಪ್ರಸ್ತುತಪಡಿಸಬೇಕಿತ್ತು.**

ಲೋಕ ಸೃಷ್ಟಿಯಾದಾಗಿನಿಂದ ಯಾವ ದಾವೆದಾರನಾಗಿಯೂ ಅವನ ದಾವೆಯ ಸಮಯದಲ್ಲಿ ರಂಝಾನಿನಲ್ಲಿ ಅದೇ ತಾರೀಖುಗಳಲ್ಲಿ ಚಂದ್ರ, ಸೂರ್ಯ ಗ್ರಹಣ ಉಂಟಾದ ಉದಾಹರಣೆ ಇಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರು ಹೇಳಿದ್ದು, ಸೂರ್ಯ ಚಂದ್ರಗಳ ಗ್ರಹಣ ದೈವಿಕ ನಿಯಮಗಳಿಗೆ ವಿರುದ್ಧವಾಗಿ ಗೋಚರಿಸುವುದು ಎಂದಲ್ಲ, ಹದೀಸುಗಳಲ್ಲಿಯೂ ಇಂತಹ ಪದಗಳಿಲ್ಲ. ಬದಲು ತಾತ್ಪರ್ಯ ಇಷ್ಟೇ ಈ ಮಹದಿಯ ಮುಂಚೆ ಯಾವ ದಾವೆದಾರನ ಮುಂದೆಯೂ ಅವನು ಸತ್ಯವಂತನಾಗಿರಲಿ, ಸುಳ್ಳುಗಾರನಾಗಿರಲಿ, ಉಂಟಾಗಿದ್ದು ಇಲ್ಲ. ಅವನು ಮಹದಿ ಅಥವಾ ಪ್ರವಾದಿತ್ವದ ದಾವೆಯು ಸಾರಿರಬೇಕು ಮತ್ತು ಅವನ ಸಮಯದಲ್ಲಿ ರಂಝಾನಿನ ಅದೇ ತಾರೀಖುಗಳಲ್ಲಿ ಚಂದ್ರ ಸೂರ್ಯ ಗ್ರಹಣವು ಆಗಿರಬೇಕು. ಅಂದ ಹಾಗೆ ಆ ಮೌಲ್ವಿಗಳಿಗೆ ಈ ಭವಿಷ್ಯವಾಣಿಯ ಮೇಲೆ ಸಂಶಯವೇನಾದರೂ ಇದ್ದರೆ ಗತಕಾಲದ ಯಾವನಾದರೂ ಉದಾಹರಣೆ ಪ್ರಸ್ತುತಪಡಿಸಬೇಕಿತ್ತು. ಅದಕ್ಕೆ ಯಾವುದಾದರೂ ಗ್ರಂಥದ ಹವಾಲ ಕೊಡಬೇಕಾಗಿತ್ತು. ಈ ಹಿಂದೆಯೂ ದಾವೆದಾರನ ಮುಂದೆ ಚಂದ್ರ, ಸೂರ್ಯಗಳ ಗ್ರಹಣ ಆದದ್ದು ಘಟನೆ ಇದೆ ಎಂದು ಸಾಬೀತುಪಡಿಸಬೇಕಿತ್ತು. ಆದರೆ ಅವರುಗಳು ಅತ್ತ ಮುಖವೇ ಮಾಡಲಿಲ್ಲ. (ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್ ಸಂಪುಟ-11, ಪುಟ-330)

**ಇತಿಹಾಸದ ಪುಟದಲ್ಲಿ ಅದರ ಯಾವುದಾದರೂ ಒಂದು ಉದಾಹರಣೆ ಪ್ರಸ್ತುತಪಡಿಸಿದೆ, ನೆನಪಿರಲಿ, ನಿಶ್ಚಯವಾಗಿಯೂ ಪ್ರಸ್ತುತಪಡಿಸಲಾರಿರಿ.**

ದೈವಿಕ ನಿಯಮದಂತೆ ಚಂದ್ರ, ಸೂರ್ಯ ಗ್ರಹಣ ಆಗುವುದು ಪವಾಡ ಕಾರ್ಯವೇನಲ್ಲ ಎಂದು ಹೇಳುವುದು, ಇದು ಎರಡನೆ ಮೂರ್ಖತನವಾಗಿದೆ. ಈ ಭವಿಷ್ಯವಾಣಿಯ ಉದ್ದೇಶ ಯಾವುದೇ ಪವಾಡ ಅಚ್ಚರಿ ಉಂಟು ಮಾಡುವ ಘಟನೆಯ ವಾಗ್ದಾನ ಅಲ್ಲ. ಬದಲು ನಿಜವಾದ ಉದ್ದೇಶವೆಂದರೆ, ಯಾರದರೂ ಭಾಗಿಯಾಗಿರುವಂತಹ ಒಂದು ದೃಷ್ಟಾಂತ ತೋರಿಸುವುದಾಗಿದೆ.

ಆದುದರಿಂದ ಹದೀಸಿನಲ್ಲಿ ಈ ಗುರುತು ನಿಡಲಾಗಿದೆ. ಸತ್ಯವಂತನಾದ ಮಹದಿ ದಾವೆ ಹೂಡುವಾಗ ಅವನ ಕಾಲದಲ್ಲಿ ಖಮರ್ (ಚಂದ್ರನನ್ನು) ರಂಝಾನ್ ತಿಂಗಳಿನಲ್ಲಿ ತನ್ನ ಗ್ರಹಣದ ಮೊದಲ ರಾತ್ರಿಯಲ್ಲಿ ಗ್ರಹಣ ಹಿಡಿಯುವುದು. ಇಂತಹ ಘಟನೆ ಹಿಂದೆ ಎಂದೂ ನಡೆದಿರಲಿಲ್ಲ. ಯಾವ ಸುಳ್ಳುಗಾರ ಮಹದಿಯ ಸಮಯದಲ್ಲೂ ರಂಝಾನ್ ತಿಂಗಳಿನಲ್ಲಿ ಆ ತಾರೀಖುಗಳಲ್ಲಿ ಚಂದ್ರ, ಸೂರ್ಯ ಗ್ರಹಣ ನಡೆದಿಲ್ಲ. ಆಗಿದ್ದರೆ ಅದರ ಉದಾಹರಣೆ ನೀಡಿ, ಇಲ್ಲದಿದ್ದರೆ ಈ ಘಟನೆ ಸ್ವಯಂ ಒಂದು ಅದ್ಭುತ ಪವಾಡ ಸದೃಶ್ಯವಾಗಿರುವಾಗ ದೇವನಿಯಮಕ್ಕೆ ವಿರುದ್ಧವಾಗಿ ಇನ್ನೊಂದು ಅರ್ಥ ಕೊಡುವ ಅವಶ್ಯಕತೆಯೇನಿದೆ. ಒಂದು ಗುರುತು ತಿಳಿಸುವ ಉದ್ದೇಶವಿತ್ತು. ಅದು ಸಾಬೀತಾಗಿದೆ. ಸಾಬೀತಾಗಿಲ್ಲ ಎಂದಾದರೆ ಈ ಘಟನೆಯ ಕುರಿತು ಲೋಕದ ಇತಿಹಾಸ ಪುಟದಲ್ಲಿಯೇ ಒಂದು ಉದಾಹರಣೆ ನೀಡಿ, ನೆನಪಿಡಿರಿ ಎಂದು ಪ್ರಸ್ತುತಪಡಿಸಲಾರಿರಿ. (ಇಜಾಝುಲ್ ಅಹ್ಮದಿ, ಝುಮೀಮ ನುಝೂಲುಲ್ ಮಸೀಹ್, ಸಂಪುಟ-19, ಪುಟ-141)

**ಈ ದೃಷ್ಟಾಂತ ಅನ್ಯ ಪ್ರವಾದಿತ್ವ ವಾದಿಗಾಗಿ ಅಥವಾ ಸಂದೇಶವಾಹಕನಿಗಾಗಿಯೂ ಉಂಟಾಗಿದೆ ಎಂದು ಸಾಬೀತುಪಡಿಸಿದರೆ ಒಂದು ಸಾವಿರ ರೂಪಾಯಿಯ ಬಹುಮಾನದ ಪಂಥಾಹ್ವಾನ**

ಎಚ್ಚರ! ನೀವು ಅಲ್ಲಾಹನ ವಚನಗಳನ್ನು ದಿಕ್ಕರಿಸಿದ್ದೀರಿ ಮತ್ತು ಸುಳ್ಳಾಗಿಸಿದ್ದೀರಿ. ಆದರೂ ಈ ದೃಷ್ಟಾಂತದ ಮಾದರಿಯನ್ನು ಪ್ರಸ್ತುತಪಡಿಸಲಿಲ್ಲ. ಕೆಲವರು ಯೋಚನೆಗಳ ನಂತರ ಸಮರ್ಥನೆ ನೀಡಿದವರಿದ್ದಾರೆ. ಅಂದ ಹಾಗೆ ಓ ಅವಸರಪಡುವವರೇ ತುಸು ಆಲೋಚಿಸಿರಿ, ವಿಮರ್ಶಿಸಿರಿ, ಉಭಯತ್ರರಲ್ಲಿ ಶಾಂತಿಪೂರ್ಣ ಮಾರ್ಗ ಹಿಡಿದವರು ಯಾರು. ನಿಮಗೆ ರಸೂಲುಲ್ಲಾಹ್(ಸ) ರವರ ಹದೀಸನ್ನು ತಿರಸ್ಕರಿಸಲು ಭಯವಾಗುವುದಿಲ್ಲವೇ, ಅದಾಗ್ಯೂ ಅದು ಸೂರ್ಯನ ಬೆಳಕಿನಂತೆ ಸತ್ಯ ಒಳಗೊಂಡಿದೆ. ನೀವು ಯಾವುದೇ ಕಾಲದಿಂದ ಆ ಉದಾಹರಣೆ ನೀಡಬಲ್ಲಿರಿ. ಯಾವುದಾದರೂ ಗ್ರಂಥದಲ್ಲಿ ಓದಿದರೆ, ಇಂತಹದೊಂದು ಘಟನೆ ಒಬ್ಬ ವ್ಯಕ್ತಿ ಅಲ್ಲಾಹನೆಡೆಯಿಂದ ಬಂದವನಾಗಿದ್ದೇನೆ ಎಂದು ದಾವೆಯು ಹೂಡಿರಬೇಕು ಮತ್ತು ಅವನ ಕಾಲದಲ್ಲಿ ರಂಝಾನಿನಲ್ಲಿ ಚಂದ್ರ ಸೂರ್ಯ ಗ್ರಹಣವು ಉಂಟಾಗಿರಬೇಕು. ಇದೀಗ ನೀವು ನೋಡಿರುವಂತೆ ಹಾಗೇನಾದರೂ ಇದ್ದರೆ ಹೇಳಿರಿ. ನಿಮಗೆ ಸಾವಿರ ರೂಪಾಯಿಗಳ ಬಹುಮಾನ ದೊರೆಯುವುದು. ಅಂದ ಹಾಗೆ ಸಾಬೀತುಪಡಿಸಿ ಮತ್ತು ಬಹುಮಾನ ಪಡೆಯಿರಿ. ನಾನು ನನ್ನ ಈ ದಾವೆ ಅಲ್ಲಾಹನನ್ನು ಸಾಕ್ಷ್ಯವಹಿಸಿ ಹೇಳುತ್ತೇನೆ. ನೀವು ಸಾಕ್ಷ್ಯವಾಗಿರಿ, ಅಲ್ಲಾಹನು ಎಲ್ಲ ಸಾಕ್ಷ್ಯಗಳಲ್ಲಿ ಅತ್ಯುತ್ತಮನು. ನೀವು ಸಾಬೀತುಪಡಿಸಲಿಲ್ಲವಾದರೆ, ನಿಶ್ಚಯವಾಗಿಯೂ ನೀವು ಸಾಬೀತುಪಡಿಸಲಾರಿರಿ. ಹಾಗಾದರೆ ಅತಿಕರ್ಮಿಗಳಿಗೆ ವಿಧಿಸಲಾದ ಆ ನರಕಾಗ್ನಿಯಿಂದ ಭಯಪಡುವವರಾಗಿರಿ. (ನೂರುಲ್ ಹಖ್ ಭಾಗ-2. ರೂಹಾನಿ ಖಝಾಈನ್, ಸಂಪುಟ-8, ಪುಟ-211)

**ಅಲ್ಲಾಹನ ದೃಷ್ಟಾಂತಗಳಿಂದ ಮುಖ ತಿರುಗಿಸಬೇಡಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಓ ಜನರೇ! ನೀವು ಸ್ವೀಕರಿಸಿರಿ, ಸ್ವೀಕರಿಸದಿರಿ. ನಿಸ್ಸಂದೇಹವಾಗಿಯೂ ಆ ದೃಷ್ಟಾಂತ ಪ್ರಕಟಗೊಂಡಿದೆ ಮತ್ತು ನ್ಯಾಯಪೂರ್ತಿ ಕಾರಣವಾಗಿದೆ. ಈ ಚಂದ್ರ ಸೂರ್ಯ ಗ್ರಹಣಗಳ ಉದಾಹರಣೆ ತೋರಿಸಲು ನೀವು ಅಸಮರ್ಥರು, ಆದುದರಿಂದ ಅಲ್ಲಾಹನ ದೃಷ್ಟಾಂತಗಳಿಂದ ಮುಖ ತಿರುಗಿಸಬೇಡಿ. (ನೂರುಲ್ ಹಖ್, ಭಾಗ-3, ರೂಹಾನಿ ಖಝಾಈನ್, ಸಂಪುಟ-8, ಪುಟ-255).

ಮುಂಚಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

**ನಮ್ಮ ಉದ್ದೇಶ**

ನಮ್ಮ ಉದ್ದೇಶ ನಾವು ಸ್ವಯಂ ದರ್ಶನ ಪಡೆದಂತಹ ಆ ದೇವನೆಡೆಗೆ (ಅಲ್ಲಾಹನೆಡೆಗೆ) ಮಾರ್ಗದರ್ಶನ ನೀಡುವ ಹೊರತು ಬೇರೇನಿಲ್ಲ. ಕಥೆ ಕಾದಂಬರಿ ರೀತಿಯಲ್ಲಿ ನಾವು ದೇವನನ್ನು (ಅಲ್ಲಾಹನನ್ನು) ಕಾಣಬಯಸುವುದಿಲ್ಲ. ಬದಲು ನಾವು ನಮ್ಮ ಸ್ವಂತ ಅನುಭವದಿಂದ ತನ್ನನ್ನು ಮಾದರಿಯನ್ನಾಗಿ ಮಾಡಿ ಅಲ್ಲಾಹನ ಅಸ್ತಿತ್ವವನ್ನು ಮನವರಿಕೆ ಮಾಡಬಯಸುತ್ತೇನೆ. ಇದೊಂದು ನೇರವಾದ ಮಾತಾಗಿದೆ. ಯಾರು ಅಲ್ಲಾಹನೆಡೆ ಎಷ್ಟರಮಟ್ಟಿಗೆ ಹೆಜ್ಜೆಯನ್ನಿಡುವನೋ ಅಲ್ಲಾಹನು ಅದಕ್ಕಿಂತ ಹೆಚ್ಚಿನ ವೇಗದಿಂದ ಅವನತ್ತ ಬರುವನು. ಇದನ್ನು ನಾವು ಲೋಕದಲ್ಲಿ ಸರ್ವಸಾಮಾನ್ಯವಾಗಿ ಕಾಣುತ್ತಿರುತ್ತೇವೆ, ಒಬ್ಬ ಮರ್ಯಾದಸ್ಥ, ಪ್ರೀತಿವಂತನೊಬ್ಬನು ಮರ್ಯಾದೆಗೆ ಅರ್ಹನೆಂದು ಪರಿಗಣಿಸುವಾಗ, ಅಲ್ಲಾಹನ ಸಾನಿಧ್ಯ ಪಡೆಯುವವನು. ತನ್ನಲ್ಲಿ ಅಲ್ಲಾಹನ ಶಕ್ತಿಯನ್ನು ಪ್ರದರ್ಶಿಸುವಂತಹ ಯಾವ ಲಕ್ಷಣಗಳು ಪಡೆಯಲಾರನು? **(ಮಲ್ಫೂಝಾತ್ ಸಂಪುಟ-1, ಪುಟ-291, ಮುದ್ರಣ ಖಾದಿಯಾನ್ 2018)**

**ಅನ್ಯ ಗೋತ್ರಗಳೊಂದಿಗೆ ವಿವಾಹ**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: ಇನ್ನ **ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್ಕಝಿಯಾ, ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಲಜ್ನ ಅವರ ಈ ಅಧಿವೇಶನದ ಪ್ರಾರಂಬ ಪವಿತ್ರ ಖುರ್‌ಆನ್ ಪಠಣದಿಂದಾಯಿತು. ಅದನ್ನು ಅಝೀಝೂ ದುರ್ರೆ ಅಜಮ್ ಲೋನ್ ಸಹಿಬಾ ನೇರವೇರಿಕೊಟ್ಟರು. ಅಝೀಝಾ ಹುಮಾ ನೂರುಲ್ ಹುದಾ ಶಾಹ್ ಸಾಹಿಬಾ ಈ ವಚನಗಳ ಉರ್ದು ಅನುವಾದ ಪ್ರಸ್ತುತಪಡಿಸಿದರು.

ಅನಂತರ ಅಝೀಝಾ ಆಯಿಶಾ ಮಹಮ್ಮದ್ ಸಾಹಿಬಾ ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್ (ರ) ರವರ ಕವನ.

ಬಾದ–ಇ–ಇರ್ಫಾನ್ ಪಿಲಾದೇ, ಹಾಂ ಪಿಲಾದೇ ಆಜ್ ತೂ

ಚಹರ–ಇ–ಝೇಬಾ ದಿಖಾದೇ, ಹಾಂ ದಿಖಾದೇ ಆಜ್ ತೂ

ಮಧುರ ಕಂಠದಿಂದ ಪ್ರಸ್ತುತಪಡಿಸಿದರು.

ಅನಂತರ ಹುಜುರ್ ಶಿಕ್ಷಣ ಕ್ಷೇತ್ರದಲ್ಲಿ ಉನ್ನತಮಟ್ಟ ಸಾಧಿಸಿದವರಿಗೆ ಸನದುಗಳನ್ನು ದಯಪಾಲಿಸಿದರು. ಮತ್ತು ಹಝ್ರತ್ ಬೇಗಂ ಸಾಹಿಬಾ ಆ ಭಾಗ್ಯಶಾಲಿ ವಿದ್ಯಾರ್ಥಿನಿಯರಿಗೆ ಪದಕಗಳನ್ನು ತೊಡಿಸಿದರು. ಶೈಕ್ಷಣಿಕ ಪ್ರಶಸ್ತಿ ಪಡೆದ ಆ ಅದೃಷ್ಟವಂತ ವಿದ್ಯಾರ್ಥಿನಿಯರ ಹೆಸರುಗಳು ಈ ಕೆಳಗಿನಂತಿವೆ: ಅದೀಲ ಜಾವೀದ್ ಸಾಹಿಬ, ಮದೀಹ ಆವಾನ್ ಸಾಹಿಬ, ಇಮ್ರಾನ ನಝ್‌ಹತ್ ಚೌದರಿ ಸಾಹಿಬ, ಮದೀಹ ರಾನ ಸಾಹಿಬ, ದುರ್ರೆ ಸಜಮ್ ಲೋನ್ ಸಾಹಿಬ, ಆಸಿಯಾ ಪರ್‌ವೀಝ್ ಸಾಹಿಬ, ಹನ್ನಾ ಅಝೀಝ್ ಸಾಹಿಬ, ಸಂದಸ್ ಫಾತಿಮ ಮಿರ್ಝ ಸಾಹಿಬ, ಇಮ್ರಾನ ಸಬಾಹತ್ ಅಹ್ಮದ್ ಸಾಹಿಬ, ಆಲಿಯಾ ಹನ್ನಾ ಮಲ್ಲಿಕ್ ಸಾಹಿಬ, ಝುನೂಬಿಯಾ ಇಫ್ಫತ್ ಸಾಹಿಬ, ಸನಾ ಭಟ್ಟಿ ಅಹ್ಮದ್ ಸಾಹಿಬ, ಅತಿಯಾ ಝುಫರ್ ಸಾಹಿಬ, ಅಮತುಲ್ ರಫೀಖ್ ಅಶ್ವಾಲ್ ಸಾಹಿಬ, ಗಾಟಿ ಕಲೀಮ್ ಸಾಹಿಬ, ಆಈನತುಲ್ ಬುಶ್ರ ಮಲಿಕ್ ಸಾಹಿಬ, ತಸ್ನೀಯ ಖೋಕರ್ ಸಾಹಿಬ, ಫಾಎಝು ಫಿರೋಝ್ ಸಾಹಿಬ, ಶಾಇಸ್ತ ಅಂದಲೀಬ್ ಸಾಹಿಬ, ನಬೀಲ ರೂಫ್ ಸಾಝ್ ಸಾಹಿಬ, ಮಸರ್ರತ್ ಸಬಾಹತ್ ಸಾಹಿಬ, ಶಾಝಿಯಾ ನಸೀರ್ ಸಾಹೆಬ, ಬುಶ್ರ ನಿಯಾಝ್ ಸಾಹಿಬ, ಫರ್‌ಹತ್ ಬಾನು ರಾನ ಸಾಹಿಬ, ಶಾಝಿಯಾ ಶಫೀಖ್ ಸಾಹಿಬ, ಸಬೀಹ ನಾಝ್ ಖುರ್ರೈಶಿ ಸಾಹಿಬ, ಸಾಈಮಾ ಇಲ್ಯಾಝ್ ಸಾಹಿಬ, ಸೌಬಿಯಾ ಮುಹಿಯುದ್ದೀನ್ ಸಾಹಿಬ, ಮಾರಿಯಾ ಶೂಈಬ್ ಸಾಹಿಬ, ಮದೀಹ ಇಲ್ಯಾಝ್ ಸಾಹಿಬ, ಅನೀಲ ಅಹ್ಮದ್ ಸಾಹಿಬ, ಮಲೀಹ ಮಹ್ಮೂದ್ ಸಾಹಿಬ, ಅನ್‌ಅಮ್ ಖಮರ್ ಸಾಹಿಬ, ಅನ್‌ಅಮ್ ಸಾಹಿಬ, ಮಾಈದಃ ಅಹ್ಮದ್ ಸಾಹಿಬ, ಖುರ್ರತುಲ್ ಐನ್ ಅನ್ವರ್ ಸಾಹಿಬ, ನೂರೈನ್ ಮೆಹ್ರೂ ಅಹ್ಮದ್ ಸಾಹಿಬ, ಮದೀಹ ಅಹ್ಮದ್ ಸಾಹಿಬ, ರಿಝ್ವನ ಅಂಜುಮ್ ಅಹ್ಮದ್ ಸಾಹಿಬ, ನಿದಾಉನ್ನಾಸಿರ್ ಅಹ್ಮದ್ ಸಾಹಿಬ, ಅನೀಲ ಅಹ್ಮದ್ ಸಾಹಿಬ, ಸಿದ್ರಃ ಯೂನುಸ್ ಸಾಹಿಬ, ಮಲೀಹ ಅರಮ್ ಸಾಹಿಬ, ನವೀದುಲ್ ಫಲಾಹ ಅಹ್ಸನ್ಗ ಸಾಹಿಬ, ಫರ್ವಹ್ ಯೂಸುಫ್ ಸಾಹಿಬ, ನಂದಸ್ ಅಹ್ಮದ್ ಸಾಹಿಬ, ನಾದಿಯಾ ಮಹ್ಮೂದ್ ಚೀಮ ಸಾಹಿಬ, ರಿದಾ ಅಹ್ಮದ್ ಸಾಹಿಬ, ಗುಲ್‌ಶನ್ ಶೆಹ್ಝಾದಿ ಸಾಹಿಬ, ಸಮ್ರೀನ್ ಜವೀದ್ ಸಾಹಿಬ, ಬಾಸ್ಮಾ ರಾನ ಸಾಹಿಬ, ಅನ್‌ಅಮ್ ಖಾನ್ ಸಾಹಿಬ, ಬುಶ್ರ ಇಖ್ಬಾಲ್ ಸಾಹಿಬ, ಫಾಖರ ಶಾಹೀನ್ ಮಲಿಕ್ ಸಾಹಿಬ.

ಪ್ರಶಸ್ತಿ ವಿತರಣಾ ಸಮಾರಂಭದ ತರುವಾಯ ಹುಝೂರ್(ಅತಬಿಅ) ರವರು ಸಂಬೋಧಿಸಿದರು.

**6 ಜೂನ್ 2015 ಶನಿವಾರ, ಮಹಿಳಾ ಜಲ್ಸ ಸ್ಥಳದಿಂದ ಹುಝೂರರ ಭಾಷಣ**

ತಶಹ್ಹುದ್ ತವ್ಝುಝ್ ಮತ್ತು ಸೂರ ಫಾತಿಹಾ ಪಠಿಸಿದ ನಂತರ ಹುಝೂರ್ ಹೇಳಿದರು. ಇಲ್ಲಿ ನಾನು ಪಠಿಸಿದ ವಚನಗಳಿಂದ ತಿಳಿದುಬರುವುದೇನೆಂದರೆ, ನೀವು ಸತ್ಯವಿಶ್ವಾಸಿಗಳಾಗ ಬಯಸುವುದಾದರೆ ಅಥವಾ ದಾವೆ ಮಾಡುವವರಾದರೆ, ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಅನುಸರಿಸಿರಿ.

**ಯಾ ಅಯ್ಯುಹಲ್ಲಝೀನ ಆಮನೂ ಅತೀಉಲ್ಲಾಹ ವರಸೂಲಹೂ ವಲಾ ತವಲ್ಲೌ ಅನ್‌ಹು ವ ಅನ್‌ತುಮ್ ತಸ್ಮೂನ್** (ಅಲ್‌ಅನ್‌ಫಾಲ್:21)

“ಎಲೈ ಸತ್ಯವಿಶ್ವಾಸಿಗಳೇ ನೀವು ಅಲ್ಲಾಹನು ಅವನ ಸಂದೇಶವಾಹಕನನ್ನು ಅನುಸರಿಸಿರಿ. (ಅವರು ಆದೇಶಿಸುವುದನ್ನು ಕೇಳುತ್ತಿದ್ದು, ಅವರಿಂದ ಮುಖ ತಿರುಗಿಸಬೇಡಿರಿ. ಈ ಆದೇಶವೆಲ್ಲ ನಿಮಗೆ ತಲುಪಿಸುತ್ತಿದ್ದೇವೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮಾತುಗಳನ್ನು ನಿಮ್ಮಲ್ಲಿಗೆ ತಲುಪಿಸುತ್ತಿದ್ದೇವೆ. ಈ ಅನಸುರಣೆಯ ಪಾಠ ಮತ್ತು ಆಜ್ಞೆ ಏಕೆ ಕೊಡುತ್ತಿದ್ದೇವೆ? ಈ ಮೂಲಕ ನಿವು ತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಂಡು ವೈಯಕ್ತಿಕವಾಗಿಯೂ, ಸಾಮೂಹಿಕವಾಗಿಯೂ ನಿಮಗೆ ಯಶಸ್ಸುಗಳು, ಪ್ರಗತಿಯೂ ದೊರೆಯುವಂತಾಗಬೇಕೆಂದಾಗಿದೆ.

ಹುಝೂರ್ ಹೇಳಿದರು. ನಮ್ಮ ಮೇಲೆ ಅಲ್ಲಾಹನ ಬಹು ದೊಡ್ಡ ಉಪಕಾರವಿದೆ. ಅವನು ತಮ್ಮ ಆಜ್ಞೆಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಅವತರಿಸಿಕೊಟ್ಟು ಇಲ್ಲಿಯತನಕ ಸುರಕ್ಷಿತವಾಗಿರಿಸಿದ್ದಾನೆ. ಮತ್ತು ಉಪದೇಶಗಳನ್ನು ಸರ್ವಕಾಲಕ್ಕಾಗಿರುವುದು ಎಂದು ಹೇಳಿದ್ದಾನೆ. ಮತ್ತೆ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರನ್ನು ಕಳುಹಿಸಿ. ಈ ಆಜ್ಞೆಗಳನ್ನು ಬಿಡಿಸಿಟ್ಟು ಎಲ್ಲ ಮಾರ್ಗಗಳನ್ನು ತೆರೆದಿದ್ದಾನೆ. ಮತ್ತು ಅಹ್ಮದಿಯಾ ಖಿಲಾಫತ್ ದಯಪಾಲಿಸಿ ನಮಗೆ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಆಜ್ಞೆಗಳ ಮೇಲೆ ನಡೆಯಲು ಗಮನ ಸೆಳೆದಿದ್ದಾನೆ. ಅಲ್ಲದೇ ಆ ಮೂಲಕ ನೀವು ಸದಾ ಖಿಲಾಫತ್ ಅನುಗ್ರಹದಿಂದ ಅನುಗ್ರಹಿತರಾಗಿರುವರು ಎಂದಿದ್ದಾನೆ. ನಿಮ್ಮ ಒಗ್ಗಟ್ಟು ಮತ್ತು ಶಕ್ತಿಯು ಖಾಯಂ ಆಗಿರುವುದು ಹಾಗೂ ಅಲ್ಲಾಹನ ಅನುಗ್ರಹಗಳನ್ನು ಪಡೆಯುವವರಾಗುವಿರಿ. ಆದುದರಿಂದ ಯಾರೇ ಆದರೂ ನಾನು ಈ ಜಮಾಅತಿನ ಸದಸ್ಯನಾಗಿದ್ದೆನೆ ಎಂದುಕೊಂಡರೆ, ಅಹ್ಮದಿಯಾ ಜಮಾಅತಿನಲ್ಲಿ ಸೇರಿಕೊಂಡವನಾಗಿದ್ದೆನೆ. ಖಿಲಾಫತ್ ಅಹ್ಮದಿಯಾ ನಂಬುವವನಾಗಿದ್ದೇನೆ ಎಂದುಕೊಂಡರೆ ಮತ್ತು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಕಾದಿಯಾನಿ(ಅ) ರನ್ನು ಮಸೀಹ್ ಮೌಊದ್, ಮಹದಿ ಮೌಊದ್ ಭಾವಿಸುತ್ತೇನೆ ಎಂದಾದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಪರಿಪೂರ್ಣ ಅನುಸರಣೆಯ ಭಾರ ಹೊತ್ತುಕೊಳ್ಳಬೇಕಾಗಿದೆ. ಸಂಪೂರ್ಣ ಅನುಸರಣೆಯಲ್ಲಿ ತನ್ನನ್ನು ಪ್ರಸ್ತುತಪಡಿಸಬೇಕಾಗಿದೆ.

ಹುಝೂರ್ ಹೇಳಿದರು. ಅಹ್ಮದಿಯವರು ಯಾರೇ ಆಗಿರಲಿ. ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳಿಂದ ಬೇಕೆಂದೆ ಹೊರ ನಡೆಯುವವರಾದರೆ, ಅವರು ಅಹ್ಮದಿಯರೇ ಅಲ್ಲ. ಕೆಲವು ತಪ್ಪುಗಳಾಗುತ್ತವೆ. ನ್ಯೂನತೆಗಳಿರುತ್ತವೆ. ದುರ್ಬಲತೆಗಳಿರುತ್ತವೆ. ಆದರೆ ಬೇಕಂತಲೇ ತಿಳಿದು ಹೊರನಡೆಯುವವರಾದರೆ ಅದರ ಅರ್ಥ ಅವರು ತನ್ನನ್ನು ತಾನು ಈ ಸಂಘಟನೆಯಿಂದ ಹೊರ ನಡೆಯಲು ಪ್ರಯತ್ನಿಸುತ್ತಿದ್ದಾರೆ ಎನ್ನಬಹುದು. ಆದುದರಿಂದ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಬೈಅತ್ತಿನ ಶರತ್ತುಗಳಲ್ಲಿ ಈ ಶರತ್ತನ್ನು ಬರೆದರು. ದುರಾಚಾರ ಮತ್ತು ಕೆಟ್ಟ ಅಭಿಲಾಷೆಗಳಿಂದ ದೂರವಿದ್ದು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಶಿರಬಾಗಿ ಸ್ವೀಕರಿಸುವೆನು ಮತ್ತು ಅಲ್ಲಾಹನ ವಚನಗಳನ್ನು ಮುಹಮ್ಮದ್ ರಸೂಲುಲ್ಲಾಹ್ (ಸ) ರ ನುಡಿಗಳನ್ನು ನಿತ್ಯ ಕೃತ್ಯಗಳಿಗೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವೆನು.

**(ಮುಂದುವರಿಯುವುದು)**

**ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ**

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮೀರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು **“ತಹ್ರೀಕ್ ಜದಿದ್ ಹಫ್ತಮಾಲ್”** ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಿಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. “ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝುಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 20 May 2021, Issue No. 20

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹುಝೂರ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 19ರ ವರದಿಯ ಉಳಿದ ಭಾಗ)**

ಒಂದು ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಲೋಕದಲ್ಲಿ ಒಂದು ಸಮುದಾಯ ಹೀಗೂ ಇದೆ. ಅವರಲ್ಲಿ ಮಹಿಳೆ ಒಂದಕ್ಕಿಂದ ಹೆಚ್ಚು ಪುರುಷರೊಂದಿಗೆ ವಿವಾಹವಾಗುವ ಹಕ್ಕಿದೆ ಮತ್ತು ಸಂತಾನ ನಡೆಸುತ್ತದೆ. ಆದರೆ ಈ ಮಗು ಯಾರದ್ದು? ಎಂಬುದು ತಿಳಿದು ಬರುವುದಿಲ್ಲ. ಸಾಮಾನ್ಯವಾಗಿ ಎಲ್ಲ ಸಮಾಜದಲ್ಲೂ ಸಂತಾನ ಪುರುಷರಿಂದ ಗುರುತಿಸ್ಪಡುತ್ತದೆ ಆ ಕಾರಣದಿಂದಲೇ ಪುರುಷನು ನಾಲ್ಕು ಮದುವೆ ಮಾಡಿಕೊಳ್ಳಬಹುದು. ಪುರುಷನು ಅಗತ್ಯಗಳು ಹೆಂಗಸರಿಂತ ಹೆಚ್ಚಾಗಿರುತ್ತದೆ. ಈ ಕಾರಣದಿಂದಲೂ ಅವನಿಗೆ ಅನುಮತಿ ದೊರೆತಿದೆ. ಆದರೆ ಮಹಿಳೆಯು ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಂಡರೆ ವಂಶ ತಿಳಿಯಲು ಸಾಧ್ಯವಾಗಲಾರದು.

ಈ ಭೇಟಿಯ ನಂತರ ತಂಡದ ಸದಸ್ಯರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಲಿಥ್ವಾನಿಯಾದಿಂದ ಬಂದ ವಕೀಲರೊಬ್ಬರು Mr. Sarvnas ಹೇಳಿದರು. ನಾನು ಇಲ್ಲಿ ನಿಮ್ಮ ಜಲ್ಸದಲ್ಲಿ ಬಂದು ತುಂಬ ಪ್ರಭಾವಿತನಾಗಿದ್ದೇನೆ. ನಾನು ನಿಮ್ಮ ಖಲೀಫರ ಭಾಷಣಗಳನ್ನು ಕೇಳಿರುತ್ತೇನೆ. ಇಸ್ಲಾಂ ಧರ್ಮದ ವಾಸ್ತವ ತಿಳಿಯಿತು. ನಾನು ನಿಮಗೆ ಕೃತಜ್ಞನಾಗಿದ್ದೇನೆ. ಮತ್ತು ಒಬ್ಬ ವಕೀಲನಾದ ನೆಲೆಯಲ್ಲಿ ನಿಮ್ಮ ಜಮಾಅತಿನ ಚಟುವಟಿಕೆಗಳಲ್ಲಿ ಸಹಕಾರ ನೀಡಲು ಪ್ರಯತ್ನಿಸುವೆನು.

ಅದೇ ರೀತಿ ವಿಶ್ವವಿದ್ಯಾಲಯದ ವಿದ್ಯಾರ್ಥಿ Mr. Antur ಹೇಳಿದರು. ನನಗೆ ನಿಮ್ಮ ಜನರಿಂದಲೇ ಇಸ್ಲಾಮಿನ ವಾಸ್ತವ ತಿಳಿಯಿತು. ಇಲ್ಲಿ ಒಂದು ಖಲೀಫತುಲ್ ಮಸೀಹರ ಭಾಷಣಗಳನ್ನು ಕೇಳಿ ತಿಳಿಯಿತು. ಉಗ್ರವಾದ, ಭಯೋತ್ಪಾದನೆ ಎಂಬುದು ಕೆಲ ಅನಿಷ್ಠ ಜನರ ಕೆಲಸವಾಗಿದೆಯೇ ಹೊರತು ಇಸ್ಲಾಂ ಧರ್ಮದಿಂದ ಇದರ ಯಾವ ಸಂಬಂಧವೂ ಇಲ್ಲ. ಇದಕ್ಕಿಂತ ಮೊದಲು ಸಹ ಜಲ್ಸದಲ್ಲಿ ಭಾಗವಹಿಸಿದ್ದೆ. ನಿಮ್ಮ ಮುಖಾಂತರವೇ ನನಗೆ ಇಸ್ಲಾಮಿನ ವಾಸ್ತವ ತಿಳಿಯಿತು. ಅಹ್ಮದಿಯ ತನಗಿಂತ ಹೆಚ್ಚು ಅತಿಥಿಗಳಿಗೆ ಮಹತ್ವ ನೀಡುತ್ತಾರೆ. ಅವರ ಸಣ್ಣ ಸಣ್ಣ ಅಗತ್ಯಗಳ ಮೇಲೆಯೂ ನಿಗಾ ವಹಿಸುತ್ತಾರೆ.

ಇನ್ನೋರ್ವ ವಿದ್ಯಾರ್ಥಿ Mr. Edgamas ಹೇಳುತ್ತಾರೆ. ಈ ಜಲ್ಸದಲ್ಲಿ ಭಾಗವಹಿಸುವುದಕ್ಕಿಂತ ಮುಂಚೆ ನನ್ನ ಮನಸ್ಸಿನಲ್ಲಿ ವಿದ್ಯುನ್ಮಾನ ಮಾಧ್ಯಮದ ಮೂಲಕ ನೋಡಿದ ಕೆಲವು ವಿಚಾರಗಳಿಂದಾಗಿ ಇಸ್ಲಾಮಿನ ಬಗ್ಗೆ ತಪ್ಪು ಕಲ್ಪನೆ ಹೊಂದಿದ್ದೆ. ಖಲೀಫತುಲ್ ಮಸೀಹರ ಭಾಷಣಗಳನ್ನು ಕೇಳಿ, ಜಲ್ಸದ ಕಾರ್ಯಕ್ರಮಗಳನ್ನು ನೋಡಿ ಎಲ್ಲವೂ ಭಿನ್ನವಾಗಿ ಕಂಡಿತು. ಅವರ ವರ್ತನೆ ತುಂಬ ಸಕಾರಾತ್ಮಕವಾಗಿದ್ದವು. ಇಂದು ನಿಮ್ಮ ಮುಖಾಂತರ ಇಸ್ಲಾಮಿನ ವಾಸ್ತವ ರೂಪವನ್ನು ಕಾಣುತ್ತಿದ್ದೇನೆ.

ಓರ್ವ ವಿದ್ಯಾರ್ಥಿನಿ Miss victomijia ಅದೇ ರೀತಿಯ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಬಂದು ಖಲೀಫತುಲ್ ಮಸೀಹರ ಭಾಷಣಗಳನ್ನು ಕೇಳಿ ಇಸ್ಲಾಮ್ ವಾಸ್ತವವಾಗಿ ಒಂದು ಶಾಂತಿಪೂರ್ಣ ಧರ್ಮವಾಗಿದೆ. ಅಹ್ಮದಿಯರು ತುಂಬ ಸಂಘಟಿತರಾಗಿದ್ದಾರೆ. ಜಲ್ಸಕ್ಕಿಂತ ಮುಂಚೆ ನನಗೆ ಇಸ್ಲಾಮಿನ ಬಗ್ಗೆ ತಿಳುವಳಿಕೆ ಇರಲಿಲ್ಲ. ಆದರೆ ಇಂದು ಖುದ್ದು ಶಾಮೀಲಾಗಿದ್ದರಿಂದ ನನಗೆ ಬಹಳಷ್ಟು ನೋಡಲು ಸಾಧ್ಯವಾಗಿದೆ. ನೀವೆಲ್ಲರೂ ತುಂಬ ಸಮಾಜಮುಖಿಯಾಗಿರುವಿರಿ.

ಲಿಥ್ವಾನಿಯಾದಿಂದ ಇಬ್ಬರು ಮಹಿಳಾ ಅತಿಥಿಗಳು Jumititia ಸಾಹಿಬಾ ಮತ್ತು Deimanta ಸಾಹಿಬಾ ಬಂದಿದ್ದರು. ಈ ಮಹಿಳೆಯರು ಒಂದು Business ಶಾಲೆಯ ಶಿಕ್ಷಕಿಯರಾಗಿದ್ದಾರೆ. ಅವರು ಹೇಳಿದರು.

ಹುಝೂರ್ ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದಾರೆ. ಅವರೊಂದಿಗೆ ಭೇಟಿಯಾಯಿತು. ವಿವಿಧ ವಿಷಯಗಳ ಕುರಿತು ಮಾತುಗಳಾದವು. ಅವರು ವಿಭಿನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುತ್ತಾರೆ. ಉದಾಹರಣೆಗೆ ಇಸ್ಲಾಮಿನಲ್ಲಿ ನಾಲ್ಕು ಮದುವೆಗಳ ಪ್ರಶ್ನೆ ಇತ್ಯಾದಿ. ಅವರು ತುಂಬ ಉತ್ಸಾಹಿತ ವ್ಯಕ್ತಿಯಾಗಿದ್ದಾರೆ. ಅವರ ಉತ್ತರಗಳು ತುಂಬ ಸಮಂಜಸವಾಗಿದ್ದವು ಮತ್ತು ಪ್ರಭಾವಿತವಾಗುವಂತಿದ್ದವು. ಜಮಾಅತಿನ ಶಿಕ್ಷಣ Love Forall Hatred for none ಅತ್ಯುತ್ತಮ ಶಿಕ್ಷಣವಾಗಿದೆ. ಏಕೆಂದರೆ ಒಳ್ಳೆಯತನವು ಒಳ್ಳೆಯತನಕ್ಕೆ ದಾರಿಮಾಡಿಕೊಡುತ್ತದೆ. ಇಲ್ಲಿಯ ವ್ಯವಸ್ಥೆ ತುಂಬ ಚೆನ್ನಾಗಿತ್ತು. ತುಂಬ ಒಳ್ಳೆಯ ಜನರಿದ್ದಾರೆ. ಎಲ್ಲವೂ ಸುವ್ಯವಸ್ಥಿತವಾಗಿದೆ. ನಮಗೆ ಇಲ್ಲಿ ಬಂದೇ ಇಸ್ಲಾಮಿನ ವಾಸ್ತವ ತಿಳಿಯಿತು. ನಮಗೆ ಎಲ್ಲ ರೀತಿಯಿಂದ ಸತ್ಕರಿಸಲಾಯಿತು. ಎಲ್ಲ ಅಗತ್ಯಗಳ ಕುರಿತು ಗಮನವಹಿಸಲಾಯಿತು. ಯಾವುದೇ ಒಂದು ವಸ್ತುವಿನ ಬಗ್ಗೆ ಯೋಚಿಸುವುದಕ್ಕೀಂತ ಮುಂಚೆಯೆ ಅದರ ಬೇಡಿಕೆ ಪೂರೈಸಲಾಯಿತು. ಅಷ್ಟೊಂದು ಉತ್ತಮ ಆತಿಥ್ಯಕ್ಕೆ ನಾವು ಕೃತಜ್ಞರಾಗಿದ್ದೇವೆ.

ಅದೇ ರೀತಿ ಇಂಗ್ಲೀಷ್ ಭಾಷೆಯ ಒಬ್ಬ ಶಿಕ್ಷಕ Mr. Makam's seviys ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು.

ಜಲ್ಸದಲ್ಲಿ ಭಾಗವಹಿಸಿದಕ್ಕಿಂತ ಮುಂಚೆ ಇಸ್ಲಾಮ್ ಒಂದು ಕಠಿಣವಾದ ಧರ್ಮ ಎಂದೆನಿಸಿತ್ತು. ಜಲ್ಸದ ಮೊದಲ ದಿನವೇ ಅರಿಯುವಂತಾಯಿತು. ಇಸ್ಲಾಮ್ ತುಂಬ ಒಳ್ಳೆಯ ಧರ್ಮವಾಗಿದೆ. ಮಾಧ್ಯಮದಲ್ಲಿ ಇಸ್ಲಾಮಿನ ಬಗ್ಗೆ ಕೆಟ್ಟದಾಗಿ ತೋರಿಸಲಾಗುತ್ತದೆ. ನಮ್ಮ ಖಲೀಫರು ಇಸ್ಲಾಮಿನ ನಿಜರೂಪ ಪ್ರದರ್ಶಿಸಿದರು. ನನಗೆ ಅರಿಯುವಂತಾಯಿತು. ಇಸ್ಲಾಮ್ ಎಲ್ಲ ರೀತಿಯ ಉಗ್ರವಾದವನ್ನು ಧಮನಿಸುತ್ತದೆ ಎಂದು. ನಿಮ್ಮ ಖಲೀಫರು ಪ್ರಸಕ್ತ ಪರಿಸ್ಥಿತಿಗಳ ಮೇಲೆ ತುಂಬ ಆಳವಾದ ಜ್ಞಾನ ಹೊಂದಿದವರಾಗಿದ್ದಾರೆ. ಅದರ ಬಗ್ಗೆ ಚೆನ್ನಾಗಿ ವಿವರ ನೀಡುತ್ತಾರೆ. ಜಿಹಾದಿನ ವಾಸ್ತವ ನಮಗೆ ಇಲ್ಲಿ ಬಂದು ತಿಳಿಯಿತು. ಇತರ ಮುಸ್ಲಿಮರು ಜಿಹಾದ್ ಕುರಿತು ತಪ್ಪಾಗಿ ಬಿಂಬಿಸುತ್ತಾರೆ. ಇಲ್ಲಿ ಬಂದು ನಾವು ಬಹಳಷ್ಟು ಕಲಿತಿದ್ದೇವೆ.

ಲಿಥ್ವಾನಿಯಾ ತಂಡಗಳ ಈ ಭೇಟಿ 9.20 ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ತಂಡಗಳ ಎಲ್ಲ ಸದಸ್ಯರು ಹುಝೂರರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಪೂರ್ವಕವಾಗಿ ಎಲ್ಲರಿಗೂ ಹಸ್ತಲಾಘವ ಮಾಡುವ ಭಾಗ್ಯ ದಯಪಾಲಿಸಿದರು ಮತ್ತು ಲೇಖನಿಗಳನ್ನು ನೀಡಿದರು.

ಅನಂತರ ಹುಝೂರ್ ಕೆಲ ಸಮಯಕ್ಕಾಗಿ ತಮ್ಮ ವಸತಿನಿಲಯಕ್ಕೆ ತೆರಳಿದರು.

ಹುಝೂರ್ 9.50 ಗಂಟೆಗೆ ಪುರುಷರ ಜಲ್ಸಸ್ಥಳಕ್ಕೆ ಆಗಮಿಸಿ ಮಗ್ರೀಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**6 ಜೂನ್ 2015 ಶನಿವಾರ**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಜಲ್ಸಸ್ಥಳಕ್ಕೆ ಆಗಮಿಸಿ ನಮಾಝ್ ಫಜ್ರ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು. ನಂತರ ಹುಝೂರ್ ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು. ವಿವಿಧ ರೀತಿಯ ಕಚೇರಿ ಕಾರ್ಯಗಳನ್ನು ನಿರ್ವಹಿಸಿದರು.

ಇಂದು ಜಲ್ಸ ಸ್ಥಳದಲ್ಲಿ ಕಾರ್ಯಕ್ರಮದನ್ವಯ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಬೇಕಾಗಿತ್ತು.

**ಲಜ್ನ ಜಲ್ಸದ ಕಾರ್ಯವಾಹಿಗಳು:**

ಇಂದು ಲಜ್ನ ಜಲ್ಸಸ್ಥಳದಲ್ಲಿ ಬೆಳಗ್ಗಿನ ಅಧಿವೇಶನದ ಪ್ರಾರಂಭ ಹಝ್‌ರತ್ ಬೇಗಂ ಸಾಹಿಬಾ(ಮ.ಅ) ಅಧ್ಯಕ್ಷತೆಯಲ್ಲಿ ಜರುಗಿತು. ಅದು ಮಧ್ಯಾಹ್ನ 11 ಗಂಟೆವರೆಗೆ ನಡೆಯಿತು ಈ ಅಧಿವೇಶನದಲ್ಲಿ ಪವಿತ್ರ ಖುರ್‌ಆನ್ ಪಠಣ ಮತ್ತು ಅದರ ಉರ್ದು, ಜರ್ಮನ್ ಭಾಷೆಗಳಲ್ಲಿ ಅನುವಾದ, ಎರಡು ಕವನಗಳು ಅಲ್ಲದೇ ಮೂರು ಭಾಷಣಗಳಾದವು.

ಕಾರ್ಯಕ್ರಮದನ್ವಯ ಮಧ್ಯಾಹ್ನ 12 ಗಂಟೆಗೆ ಹುಝೂರ್ ಜಲ್ಸಸ್ಥಳಕ್ಕೆ ಆಗಮಿಸಿದರು. ನಾಝಿಮ ಆಲಾ ಹಾಗೂ ನೆಫ್ಸಲ್ ಸದರ್ ಲಜ್ನ ಜರ್ಮನಿ ತಮ್ಮ ನಾಯಿಬ್ ನಾಝೀಮಾತ್ ಜೊತೆಗೊಂಡು ಹುಝೂರ್ ಅವರನ್ನು ಸ್ವಾಗತಿಸಿದರು. ಮಹಿಳೆಯರು ಉತ್ಸಹಭರಿತ ಘೋಷಣೆಗಳನ್ನು ಮೊಳಗಿಸುತ್ತ ತನ್ನ ಪ್ರೀತಿಯ ಖಲೀಫರನ್ನು ಸ್ವಾಗತಿಸಿದರು.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.